# Monthly Magazine

## January 2022

Karunaduexams Team

karunaduexams.com

**ಪ್ರಕಟಣೆ:**

ಆತ್ಮೀಯ ಓದುಗರೇ,

ಕರುನಾಡು ಎಗ್ಸಾಮ್ಸ್ ತಂಡವು , ಇನ್ನು ಹೆಚ್ಚಿನ ವಿಷಯಗಳನ್ನು ಪ್ರಕಟಣೆ ಮಾಡುವಸಲುವಾಗಿ , ಸ್ಪರ್ಧಾತ್ಮಕ ಪರೀಕ್ಷೆಯ ವಿಷಯಗಳ ಬರಹಗಾರರನ್ನು ನೇಮಿಸಲು ನಿಮ್ಮ ಸಹಕಾರವನ್ನು ಇಚ್ಛಿಸುತ್ತೇವೆ. ಆಸಕ್ತಿಯುಳ್ಳ ಬರಗಾರರು ನಿಮ್ಮ BIO DATA ವನ್ನು Email ಮೂಲಕ ಕಳುಹಿಸಿ.

Email: Info@karunaduexams@org

ಗುರಿ ನಿಮ್ಮದು…ಮಾರ್ಗದರ್ಶನ ನಮ್ಮದು……..
ಸಂಪಾದಕರು

Karunaduexams.com

1. ಇತ್ತೀಚಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ರವರು ಈ ಕೆಳಗಿನ ಯಾವ ನಗರದಲ್ಲಿ "ಮೇಜರ್ ಧ್ಯಾನ್‌ಚಂದ್ ಕ್ರೀಡಾ ವಿಶ್ವವಿದ್ಯಾಲ"ಯಕ್ಕೆ ಶಂಕುಸ್ಥಾಪನೆ ನೇರವೇರಿಸಿದರು?

ಅ) ಭೂಪಾಲ್

ಆ) ಮೀರತ್

ಇ) ಆಗ್ರಾ

ಈ) ಸೂರತ್

ಮೀರತ್

ಪ್ರಧಾನಿ ನರೇಂದ್ರ ಮೋದಿ ರವರು ಉತ್ತರ ಪ್ರದೇಶದ ಮೀರತ್ ನಲ್ಲಿ ಮೇಜರ್ ಧ್ಯಾನ್ ಚಂದ್ ಕ್ರೀಡಾ ವಿಶ್ವವಿದ್ಯಾಲಯಕ್ಕೆ ಶಂಕು ಸ್ಥಾಪನೆ ಮಾಡಿದರು. ಸುಮಾರು 700 ಕೋಟಿ ರೂಪಾಯಿಗಳ ವೆಚ್ಚದಲ್ಲಿ 91 ಎಕರೆ ಪ್ರದೇಶದಲ್ಲಿ ಈ ವಿಶ್ವವಿದ್ಯಾಲಯ ತಲೆ ಎತ್ತಲಿದೆ. ಪ್ರತಿ ವರ್ಷ ಸುಮಾರು 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆಯಲಿದ್ದಾರೆ.

2. ಯಾವ ದೇಶದಲ್ಲಿ ರಸ್ತೆ ಮತ್ತು ರೈಲ್ವೆ ಎರಡೂ ಮಾರ್ಗದಲ್ಲಿ ಚಲಿಸುವ ವಿಶ್ವದ ಮೊದಲ ಡ್ಯುಯಲ್-ಮೋಡ್ ವಾಹನಕ್ಕೆ ಚಾಲನೆ ನೀಡಲಾಯಿತು?

ಅ) ಅಮೆರಿಕ

ಆ) ಇಟಲಿ

ಇ) ಜಪಾನ್

ಈ) ಸ್ಪೇನ್

ಜಪಾನ್

ಜಪಾನಿನ ಕೈಯೊ ನಗರದಲ್ಲಿ ವಿಶ್ವದ ಮೊದಲ ಡ್ಯುಯಲ್ ಮೋಡ್ ವಾಹನ ಸೇವೆಯನ್ನು ಆರಂಭಿಸಿದೆ. ಡಿಎಂಇ ಎಂದು ಕರೆಯಲಾಗುವ ಮಿನಿ ಬಸ್ ರೀತಿಯ ಈ ವಾಹನವನ್ನು ರಸ್ತೆ ಮತ್ತು ರೈಲ್ವೆ ಹಳಿ ಮೇಲೆ ಚಲಿಸುವಂತೆ ವಿನ್ಯಾಸಗೊಳಿಸಲಾಗಿದೆ.

3.ನೀತಿ ಆಯೋಗ ಇತ್ತೀಚೆಗೆ ಬಿಡುಗಡೆಗೊಳಿಸಿದ "ಆರೋಗ್ಯ ಕಾರ್ಯಕ್ಷಮತೆ ಸೂಚ್ಯಂಕ"ದಲ್ಲಿ ಕ್ರಮವಾಗಿ ಮೊದಲು ಮತ್ತು ಕೊನೆಯ ಸ್ಥಾನವನ್ನುಗಳಿಸಿರುವ ರಾಜ್ಯಗಳು ಯಾವುವು?

ಅ) ಕೇರಳ ಮತ್ತು ಉತ್ತರ ಪ್ರದೇಶ

ಆ) ಕೇರಳ ಮತ್ತು ಬಿಹಾರ

ಇ) ಪಂಜಾಬ್ ಮತ್ತು ಉತ್ತರ ಪ್ರದೇಶ

ಈ) ಕರ್ನಾಟಕ ಮತ್ತು ಅಸ್ಸಾಂ

ಕೇರಳ ಮತ್ತು ಉತ್ತರ ಪ್ರದೇಶ

ನೀತಿ ಆಯೋಗವು 2019-20 ರ ರಾಜ್ಯ ಆರೋಗ್ಯ ಸೂಚ್ಯಂಕದ ನಾಲ್ಕನೇ ಆವೃತ್ತಿಯನ್ನು ಬಿಡುಗಡೆ ಮಾಡಿದೆ. "ಆರೋಗ್ಯಕರ ರಾಜ್ಯಗಳು, ಪ್ರಗತಿಶೀಲ ಭಾರತ" ಎಂಬ ಶೀರ್ಷಿಕೆಯಡಿ ವರದಿಯು ಆರೋಗ್ಯದ

karunaduexams.com

ಫಲಿತಾಂಶಗಳಲ್ಲಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಕಾರ್ಯಕ್ಷಮತೆ ಮತ್ತು ಅವುಗಳ ಒಟ್ಟಾರೆ ಸ್ಥಿತಿಯ ಮೇಲೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಶ್ರೇಯಾಂಕವನ್ನು ನೀಡುತ್ತದೆ. ದೊಡ್ಡ ರಾಜ್ಯಗಳ ಪೈಕಿ ಕೇರಳ ಮೊದಲ ಸ್ಥಾನದಲ್ಲಿದ್ದು ಉತ್ತರಪ್ರದೇಶ ಕಡೆಯ ಸ್ಥಾನದಲ್ಲಿದೆ. ಚಿಕ್ಕ ರಾಜ್ಯಗಳ ಪೈಕಿ ಮಿಜೋರಾಮ್ ಮೊದಲ ಸ್ಥಾನದಲ್ಲಿದ್ದು ನಾಗಾಲ್ಯಾಂಡ್ ಕಡೆಯ ಸ್ಥಾನದಲ್ಲಿದೆ. ಕರ್ನಾಟಕ 9ನೇ ಸ್ಥಾನದಲ್ಲಿದೆ.

4. ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೆ ತಂದ "ಗ್ರಾಮ ಉಜಾಲ ಯೋಜನೆ" ಯಾವುದಕ್ಕೆ ಸಂಬಂಧಿಸಿದೆ?

ಅ) ಗ್ರಾಮೀಣ ವಿಭಾಗದಲ್ಲಿ ಕಡಿಮೆ ದರದಲ್ಲಿ ಎಲ್ಇಡಿ ಬಲ್ಬ್ ವಿತರಿಸುವುದು

ಆ) ಗೋಬರ್ ಗ್ಯಾಸ್ ನಿರ್ಮಾಣಕ್ಕೆ ಸಬ್ಸಿಡಿ ನೀಡುವುದು

ಇ) ಎಪಿಎಲ್ ಕುಟುಂಬಗಳಿಗೆ ಸಬ್ಸಿಡಿ ದರದಲ್ಲಿ ಅಡುಗೆ ಅನಿಲ ವಿತರಣೆ

ಈ) ಬಡಕುಟುಂಬಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡುವುದು

ಗ್ರಾಮೀಣ ವಿಭಾಗದಲ್ಲಿ ಕಡಿಮೆ ದರದಲ್ಲಿ ಎಲ್ಇಡಿ ಬಲ್ಬ್ ವಿತರಿಸುವುದು

ಗ್ರಾಮ ಉಜಾಲ ಯೋಜನೆ(Gram Ujala Yojana)ಯಡಿ ಕೇಂದ್ರ ಸರಕಾರ ಕೇವಲ 10 ರೂ.ಗೆ ಒಂದು ಎಲ್ಇಡಿ ಬಲ್ಬ್(LED Bulb) ನೀಡುತ್ತಿದೆ. ಈ ಬಲ್ಬ್‌ಗಳನ್ನು ಸರ್ಕಾರಿ ಕಂಪನಿ ಕನ್ವರ್ಜೆನ್ಸ್ ಎನರ್ಜಿ ಸರ್ವಿಸಸ್ ಲಿಮಿಟೆಡ್ (CESL) ನೀಡುತ್ತದೆ.

5. ಈ ಕೆಳಗಿನ ಯಾವ ದೇಶ "ಬ್ರಿಕ್ಸ್ (BRICS) ನ್ಯೂ ಡೆವೆಲಪ್ಮೆಂಟ್ ಬ್ಯಾಂಕಿ"ನ ನೂತನ ಸದಸ್ಯ ರಾಷ್ಟ್ರವಾಗಲಿದೆ?

ಅ) ಕೆನಡ

ಆ) ಬ್ರೆಜಿಲ್

ಇ) ಕೀನ್ಯಾ

ಈ) ಈಜಿಪ್ಟ್

ಈಜಿಪ್ಟ್

ಬ್ರಿಕ್ಸ್ ನ್ಯೂ ಅಭಿವೃದ್ಧಿ ಬ್ಯಾಂಕ್ (NDB) ಈಜಿಪ್ಟ್ ಅನ್ನು ತನ್ನ ಹೊಸ ಸದಸ್ಯ ರಾಷ್ಟ್ರವೆಂದು ಸೇರಿಸುವುದಾಗಿ ಘೋಷಿಸಿದೆ. NDB ಅನ್ನು 2015 ರಲ್ಲಿ BRICS ರಾಷ್ಟ್ರಗಳಾದ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾದಿಂದ ಸ್ಥಾಪಿಸಲಾಯಿತು.

karunaduexams.com

6. “Better Health Smoke Free” ಅಭಿಯಾನ ಆರಂಭಿಸಿದ ದೇಶ_______?

ಅ) ನಾರ್ವೆ

ಆ) ನೆದರ್ಲ್ಯಾಂಡ್

ಇ) ಆಸ್ಟ್ರೇಲಿಯಾ

ಈ) ಯುಕೆ

ಯುಕೆ

UK ಸರ್ಕಾರವು 'ಉತ್ತಮ ಆರೋಗ್ಯ ಹೊಗೆ-ಮುಕ್ತ' ಅಭಿಯಾನದ ಹೆಸರಿನ ಹೊಸ ಉಪಕ್ರಮವನ್ನು ಪ್ರಾರಂಭಿಸಿದೆ. ಧೂಮಪಾನಿಗಳು ಧೂಮಪಾನವನ್ನು ತ್ಯಜಿಸುವಂತೆ ಒತ್ತಾಯಿಸುವುದು ಅಭಿಯಾನದ ಉದ್ದೇಶ.

7. ಯಾವ ದೇಶ ಪರಮಾಣು ಸಮ್ಮಿಲನ ತಂತ್ರದಡಿ ಕೃತಕ ಸೂರ್ಯ ಸೃಷ್ಟಿಸಲು ಮುಂದಾಗಿದೆ?

ಅ) ಫ್ರಾನ್ಸ್

ಆ) ಚೀನಾ

ಇ) ಇಟಲಿ

ಈ) ಚಿಲಿ

ಚೀನಾ

ಕೃತಕ ಸೂರ್ಯನನ್ನು ಸೃಷ್ಟಿಸುವ ಗುರಿಯನ್ನು ಹೊಂದಿರುವ ಚೀನಾ ಇತ್ತೀಚೆಗೆ ಪರಮಾಣು ಸಮ್ಮಿಲನ ಪ್ರಯೋಗವನ್ನು ನಡೆಸಿದೆ. ಈ ಪ್ರಯೋಗವನ್ನು ಹೆಫೀ ಇನ್‌ಸ್ಟಿಟ್ಯೂಟ್ ಆಫ್ ಫಿಸಿಕಲ್ ಸೈನ್ಸ್‌ನಲ್ಲಿ ನಡೆಸಲಾಗಿದೆ. ಎಕ್ಸ್‌ಪೆರಿಮೆಂಟಲ್ ಅಡ್ವಾನ್ಸ್‌ಡ್ ಸೂಪರ್ ಕಂಡಕ್ಟಿಂಗ್ ಟೋಕಾಮಾಕ್ (ಈಸ್ಟ್) ಪ್ರಯೋಗದ ಮೂಲಕ ಕೃತಕ ಸೂರ್ಯನನ್ನು ಸೃಷ್ಟಿಸಲಾಗಿದೆ.

8. ಪ್ರಧಾನಿ ನರೇಂದ್ರ ಮೋದಿ ರವರು ಇತ್ತೀಚೆಗೆ ಶಂಕುಸ್ಥಾಪನೆ ನೆರವೇರಿಸಿದ “ರೇಣುಕಾಜಿ ಅಣೆಕಟ್ಟು ಯೋಜನೆ” ಯಾವ ರಾಜ್ಯಕ್ಕೆ ಸಂಬಂಧಿಸಿದೆ?

ಅ) ಹಿಮಾಚಲ ಪ್ರದೇಶ

ಆ) ಉತ್ತರ ಪ್ರದೇಶ

ಇ) ಬಿಹಾರ

ಈ) ಗುಜರಾತ್

ಹಿಮಾಚಲ ಪ್ರದೇಶ

ಪ್ರಧಾನಮಂತ್ರಿಯವರು ರೇಣುಕಾಜಿ ಅಣೆಕಟ್ಟು ಯೋಜನೆಗೆ ಹಿಮಾಚಲ ಪ್ರದೇಶದಲ್ಲಿ ನೆರವೇರಿಸಿದರು. ಸುಮಾರು 7000 ಕೋಟಿ ರೂ. ವೆಚ್ಚದಲ್ಲಿ 40 ಮೆಗಾವ್ಯಾಟ್ ಯೋಜನೆ ನಿರ್ಮಾಣವಾಗಲಿದೆ. ಇದರಿಂದ ವಾರ್ಷಿಕ ಸುಮಾರು 500 ದಶಲಕ್ಷ ಕ್ಯೂಬಿಕ್ ಮೀಟರ್ ನೀರು ಪಡೆಯಲು ಸಾಧ್ಯವಾಗಲಿದೆ.

karunaduexams.com

9. ಇತ್ತೀಚೆಗೆ ನಿಧನರಾದ ಮ್ಯಾನ್ ಬೂಕರ್ ಪ್ರಶಸ್ತಿ ವಿಜೇತೆ "ಕೆರಿ ಹುಲ್ಮೆ" ಯಾವ ದೇಶದವರು?

ಅ) ನ್ಯೂಜಿಲ್ಯಾಂಡ್

ಆ) ಅಮೆರಿಕ

ಇ) ಜಪಾನ್

ಈ) ಚೀನಾ

ನ್ಯೂಜಿಲ್ಯಾಂಡ್

ಮ್ಯಾನ್ ಬೂಕರ್ ಪ್ರಶಸ್ತಿಗೆ ಭಾಜನರಾಗಿದ್ದ ಕಾದಂಬರಿಗಾರ್ತಿ ಕೆರಿ ಹುಲ್ಮೆ ನಿಧನರಾದರು. ತಮ್ಮ ಮೊದಲ ಕಾದಂಬರಿ "ದಿ ಬೋನ್ ಪೀಪಲ್'ಗೆ 1984ರಲ್ಲಿ ಮ್ಯಾನ್ ಬೂಕರ್ ಪ್ರಶಸ್ತಿ ಪಡೆದಿದ್ದರು.

10. ಇತ್ತೀಚೆಗೆ ಸುದ್ದಿಯಲ್ಲಿದ್ದ "ಮಹಾರಾಜ ಪರಮಹಂಸ ದೇವಸ್ಥಾನ" ಯಾವ ದೇಶದಲ್ಲಿದೆ?

ಅ) ಪಾಕಿಸ್ತಾನ

ಆ) ಇಂಡೋನೇಷಿಯಾ

ಇ) ನೇಪಾಳ

ಈ) ಶ್ರೀಲಂಕಾ

ಪಾಕಿಸ್ತಾನ

ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ತೆರಿ ಗ್ರಾಮದಲ್ಲಿ "ಮಹಾರಾಜ ಪರಮಹಂಸ ದೇವಸ್ಥಾನ"ವಿದೆ. ಇತ್ತೀಚೆಗೆ ರೂ 3.3 ಕೋಟಿ ವೆಚ್ಚದಲ್ಲಿ ಈ ದೇವಸ್ಥಾನವನ್ನು ನವೀಕರಿಸಿದ್ದು, ಹಿಂದೂ ಭಕ್ತಾದಿಗಳಿಗೆ ಪ್ರವೇಶ ನೀಡಲಾಗಿತ್ತು.

11. ಈ ಕೆಳಗಿನ ಯಾವ ರಾಜ್ಯದಲ್ಲಿ ಕೇಂದ್ರ ಸರ್ಕಾರ ಇತ್ತೀಚೆಗೆ ಸಶಸ್ತ್ರ ಪಡೆ ವಿಶೇಷ ಅಧಿಕಾರ ಕಾಯ್ದೆ-1958 ರನ್ನು ವಿಸ್ತರಿಸಿತು?

ಅ) ಮಿಜೋರಾಂ

ಆ) ಸಿಕ್ಕಿಂ

ಇ) ನಾಗಾಲ್ಯಾಂಡ್

ಈ) ಅಸ್ಸಾಂ

ನಾಗಾಲ್ಯಾಂಡ್

ವಿವಾದಾತ್ಮಕ ಸಶಸ್ತ್ರ ಪಡೆಗಳ ವಿಶೇಷ ಅಧಿಕಾರ ಕಾಯ್ದೆ 1958 (ಎಎಫ್ಎಸ್‌ಪಿಎ) ಅನ್ನು ನಾಗಾಲ್ಯಾಂಡ್ ನಲ್ಲಿ ಇನ್ನೂ 6 ತಿಂಗಳವರೆಗೆ ವಿಸ್ತರಿಸಿ ಕೇಂದ್ರ ಸರ್ಕಾರ ಆದೇಶಿಸಿದೆ. ಕಾನೂನು ಮತ್ತು ಸುವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಳ್ಳುವ ಯಾರ ಮೇಲಾದರೂ ಕಠಿಣ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಸಶಸ್ತ್ರ ಪಡೆಗಳಿಗೆ ಈ ಕಾಯ್ದೆ ನೀಡುತ್ತದೆ. ಯಾರನ್ನೇ ಆದರೂ ವಾರೆಂಟ್ ಇಲ್ಲದೆ ಬಂಧಿಸಲು, ಯಾವುದೇ ವಾಹನ

karunaduexams.com

ಪರಿಶೀಲಿಸಲು ಹಾಗೂ ಐದು ಅಥವಾ ಅದಕ್ಕಿಂತ ಹೆಚ್ಚಿನ ಜನರು ಗುಂಪುಗೂಡದಂತೆ ನಿಷೇಧಿಸುವುದು ಈ ಕಾಯ್ದೆಯ ಕೆಲವು ವಿಶೇಷ ಅಧಿಕಾರಗಳಲ್ಲಿ ಸೇರಿವೆ.

12. Best Balkan Athlete of the year' 2021 ಪ್ರಶಸ್ತಿಗೆ ಭಾಜನರಾದ ಕ್ರೀಡಾಪಟು.....?

ಅ) ಕ್ರಿಸ್ಟಿಯಾನೋ ರೊನಾಲ್ಡೊ

ಆ) ಲಿಯೋನೆಲ್ ಮೆಸ್ಸಿ

ಇ) ನೊವಾಕ್ ಜೊಕವಿಕ್

ಈ) ರೋಜರ್ ಫೆಡರರ್

ನೊವಾಕ್ ಜೊಕವಿಕ್

ಸರ್ಬಿಯಾದ ಖ್ಯಾತ ಟೆನಿಸ್ ಆಟಗಾರ ನೊವಾಕ್ ಜೊಕೊವಿಕ್ ರವರು Best Balkan Athlete of the year' 2021 ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜೊಕೊವಿಕ್ ರವರು 7ನೇ ಬಾರಿ ಈ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

13. ಅಟಲ್ ರಾಂಕಿಂಗ್ ಆಫ್ ಇನ್ಸ್ಟಿಟ್ಯೂಷನ್ ಇನೋವೇಷನ್ ಅಚೀವ್ಮೆಂಟ್ಸ್ 2021 ಪಟ್ಟಿಯಲ್ಲಿ ಪ್ರಥಮ ಸ್ಥಾನ ಪಡೆದ ಶಿಕ್ಷಣ ಸಂಸ್ಥೆ ಯಾವುದು?

ಅ)ಐಐಟಿ ಮದ್ರಾಸ್

ಆ)ಐಐಟಿ ಬಾಂಬೆ

ಇ) ಐಐಟಿ ಖರಗಪುರ

ಈ) ಐಐಟಿ ದೆಹಲಿ

ಐಐಟಿ ಮದ್ರಾಸ್

ಅಟಲ್ ರಾಂಕಿಂಗ್ ಆಫ್ ಇನ್ಸ್ಟಿಟ್ಯೂಷನ್ ಇನೋವೇಷನ್ ಅಚೀವ್ಮೆಂಟ್ಸ್ 2021 ಪಟ್ಟಿಯಲ್ಲಿ ಐಐಟಿ ಮದ್ರಾಸ್ ಶಿಕ್ಷಣ ಸಂಸ್ಥೆ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಐಐಟಿ ಬಾಂಬೆ ಮತ್ತು ಐಐಟಿ ದೆಹಲಿ ಎರಡು ಮತ್ತು ಮೂರನೇ ಸ್ಥಾನದಲ್ಲಿದೆ.

Karunaduexams.com

14. ಯಾವ ರಾಜ್ಯ ವಿಜಯ್ ಹಜಾರೆ ಟ್ರೋಫಿ 2021-22 ಗೆದ್ದುಕೊಂಡಿತು?

ಅ) ತಮಿಳುನಾಡು

ಆ) ಹಿಮಾಚಲ ಪ್ರದೇಶ

ಇ)ಕರ್ನಾಟಕ

ಈ) ಮಹಾರಾಷ್ಟ್ರ

ಹಿಮಾಚಲ ಪ್ರದೇಶ

ಹಿಮಾಚಲಪ್ರದೇಶ ಕ್ರಿಕೆಟ್ ತಂಡ ಇದೇ ಮೊದಲ ಬಾರಿಗೆ ವಿಜಯ ಹಜಾರೆ ಟ್ರೋಫಿಯನ್ನು ಗೆದ್ದುಕೊಂಡಿತು.

15. 2021 ನೇ ಸಾಲಿನಲ್ಲಿ ಯಾವ ರಾಜ್ಯದಲ್ಲಿ ಅತಿ ಹೆಚ್ಚು ಹುಲಿಗಳ ಸಾವು ಪ್ರಕರಣ ದಾಖಲಾಗಿದೆ?

ಅ)ಕರ್ನಾಟಕ

ಆ)ಮಧ್ಯಪ್ರದೇಶ

ಇ)ಗುಜರಾತ್

ಈ)ಮಹಾರಾಷ್ಟ್ರ

ಮಧ್ಯಪ್ರದೇಶ

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ ಅಂಕಿ-ಅಂಶಗಳ ಪ್ರಕಾರ 2021 ನೇ ಸಾಲಿನಲ್ಲಿ 146 ಹುಲಿಗಳು ಸಾವನ್ನಪ್ಪಿದ್ದು ಮಧ್ಯಪ್ರದೇಶದಲ್ಲಿ ಅತಿ ಹೆಚ್ಚು ಅಂದರೆ 44 ಹುಲಿಗಳು ಸಾವನ್ನಪ್ಪಿವೆ. ನಂತರದ ಸ್ಥಾನದಲ್ಲಿ ಮಹಾರಾಷ್ಟ್ರ (26) ಮತ್ತು ಕರ್ನಾಟಕ (14) ಇದೆ.

16. ವಿಶ್ವದಲ್ಲಿ ಅತಿ ಉದ್ದನೆಯ ಮೆಟ್ರೋ ರೈಲ್ವೇ ನೆಟ್ವರ್ಕ್ ಹೊಂದಿರುವ ನಗರ ಯಾವುದು?

ಅ) ಶಾಂಘೈ

ಆ) ಬೀಜಿಂಗ್

ಇ) ಟೋಕಿಯೋ

ಈ) ದೆಹಲಿ

ಶಾಂಘೈ

karunaduexams.com

ಚೀನಾದ ಶಾಂಘೈ ನಗರ ವಿಶ್ವದಲ್ಲೇ ಅತಿ ಹೆಚ್ಚು ಉದ್ದನೆಯ ಮೆಟ್ರೋ ರೈಲ್ವೇ ನೆಟ್ವರ್ಕ್ ಹೊಂದಿರುವ ನಗರ ಎಂಬ ಖ್ಯಾತಿ ಪಡೆದುಕೊಂಡಿದೆ. ಶಾಂಗೈ ನಗರದಲ್ಲಿ 831 ಕಿಲೋಮೀಟರ್ ಉದ್ದನೆಯ ರೈಲ್ವೆ ನೆಟ್ವರ್ಕ್ ಇದೆ. ಬೀಜಿಂಗ್ ಮತ್ತು ನವದೆಹಲಿ ನಂತರದ ಸ್ಥಾನದಲ್ಲಿವೆ.

17. ಈ ಕೆಳಗಿನ ಯಾರು ರೈಲ್ವೆ ಬೋರ್ಡಿನ ಚೇರ್ಮನ್ ಮತ್ತು ಸಿಇಒ ಆಗಿ ನೇಮಕಗೊಂಡಿದ್ದಾರೆ?

ಅ) ವಿವೇಕ್ ಗೋಸ್ವಲ್

ಆ) ವಿಕೆ ತ್ರಿಪಾಠಿ

ಇ) ಅಶಿಷ್ ಪಾಂಡೆ

ಈ) ತರುಣ್ ಜೈನ್

ವಿಕೆ ತ್ರಿಪಾಠಿ

18. ಇತ್ತೀಚೆಗೆ ಪ್ರಧಾನಿ ನರೇಂದ್ರ ಮೋದಿರವರು ಬ್ರಿಟಿಷ್ ವಸಾಹತುಶಾಹಿ ವಿರುದ್ಧ ಹೋರಾಡಿದ ಭಾರತದ ಪ್ರಥಮ ಮಹಿಳೆ ರಾಣಿ ವೇಲು ನಾಚಿಯರ್ ಅವರಿಗೆ ಗೌರವ ಸಲ್ಲಿಸಿದರು. ರಾಣಿ ವೇಲು ನಾಚಿಯರ್ ಯಾವ ರಾಜ್ಯಕ್ಕೆ ಸಂಬಂಧಿಸಿದ್ದಾರೆ?

ಅ)ಪಶ್ಚಿಮ ಬಂಗಾಳ

ಆ)ತಮಿಳುನಾಡು

ಇ)ತೆಲಂಗಣ

ಈ) ಕೇರಳ

ತಮಿಳುನಾಡು

ರಾಣಿ ವೇಲು ನಾಚಿಯಾರ್ (3 ಜನವರಿ 1730 - 25 ಡಿಸೆಂಬರ್ 1796) ಶಿವಗಂಗ ಎಸ್ಟೇಟ್ನ ರಾಣಿಯಾಗಿದ್ದು, ಭಾರತದಲ್ಲಿ ಬ್ರಿಟಿಷ್ ವಸಾಹತುಶಾಹಿ ಶಕ್ತಿಯ ವಿರುದ್ಧ ಹೋರಾಡಿದ ಮೊದಲ ರಾಣಿ. ಆಕೆಯನ್ನು ತಮಿಳರು ವೀರಮಂಗೈ ("ಧೈರ್ಯಶಾಲಿ ಮಹಿಳೆ") ಎಂದು ಕರೆಯುತ್ತಾರೆ.

karunaduexams.com

19. ಕಲ್ಪನಾ ಚಾವ್ಲಾ ಸೆಂಟರ್ ಫಾರ್ ರಿಸರ್ಚ್ ಇನ್ ಸ್ಪೇಸ್ ಸೈನ್ಸ್ ಅಂಡ್ ಟೆಕ್ನಾಲಜಿಯನ್ನು ಯಾವ ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾಗಿದೆ?

ಅ)ಮದ್ರಾಸ್ ವಿಶ್ವವಿದ್ಯಾಲಯ

ಆ)ಅಲಹಾಬಾದ್ ವಿಶ್ವವಿದ್ಯಾಲಯ

ಇ) ಚಂಡಿಗರ್ ವಿಶ್ವವಿದ್ಯಾಲಯ

ಈ) ಬಾಂಬೆ ವಿಶ್ವವಿದ್ಯಾಲಯ

ಚಂಡಿಗರ್ ವಿಶ್ವವಿದ್ಯಾಲಯ

ಜನವರಿ 3, 2021 ರಂದು ಚಂಡೀಗರ್ ವಿಶ್ವವಿದ್ಯಾಲಯದಲ್ಲಿ ಕಲ್ಪನಾ ಚಾವ್ಲಾ ಸೆಂಟರ್ ಫಾರ್ ರಿಸರ್ಚ್ ಇನ್ ಸ್ಪೇಸ್ ಸೈನ್ಸ್ ಅಂಡ್ ಟೆಕ್ನಾಲಜಿಯನ್ನು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಉದ್ಘಾಟಿಸಿದರು. ಬಾಹ್ಯಾಕಾಶ ವಿಜ್ಞಾನ, ಉಪಗ್ರಹ ಅಭಿವೃದ್ಧಿ ಮತ್ತು ಬಾಹ್ಯಾಕಾಶದಲ್ಲಿ ಭವಿಷ್ಯದ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಉದ್ದೇಶದಿಂದ ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

20. ಯಾವ ದೇಶ U-19 ಏಷ್ಯಾ ಕ್ರಿಕೆಟ್ ಕಪ್ ಗೆದ್ದುಕೊಂಡಿತು?

ಅ) ಭಾರತ

ಆ)ಶ್ರೀಲಂಕಾ

ಇ) ಆಸ್ಟ್ರೇಲಿಯಾ

ಈ) ನ್ಯೂಜಿಲೆಂಡ್

ಭಾರತ

ಭಾರತ ಕ್ರಿಕೆಟ್ ತಂಡ ಶ್ರೀಲಂಕಾ ತಂಡವನ್ನು ಮಣಿಸುವ ಮೂಲಕ U-19 ಏಷ್ಯಾ ಕ್ರಿಕೆಟ್ ಕಪ್ ಅನ್ನು ತನ್ನದಾಗಿಸಿಕೊಂಡಿತು.

21. ಈ ಕೆಳಗಿನ ರಾಜ್ಯಗಳನ್ನು ಗಮನಿಸಿ:

1) ನಾಗಲ್ಯಾಂಡ್

2) ಮಣಿಪುರ

3) ಮಿಜೋರಾಂ

4) ಅರುಣಾಚಲ ಪ್ರದೇಶ

ಮೇಲಿನ ಯಾವ ರಾಜ್ಯಗಳಿಗೆ ಹೊರ ರಾಜ್ಯದವರು ಪ್ರವೇಶಿಸಲು “ಇನ್ನರ್ ಲೈನ್ ಪರ್ಮಿಟ್” ಅಗತ್ಯವಿದೆ?

karunaduexams.com

ಅ) 1 & 2

ಆ) 1, 2 & 3

ಇ) 2, 3 & 4

ಈ) 1, 2, 3 & 4

1, 2, 3 & 4

ಹೊರ ರಾಜ್ಯದ ಜನರು ಅರುಣಾಚಲ ಪ್ರದೇಶ, ಮಣಿಪುರ, ಮಿಜೋರಾಂ ಮತ್ತು ನಾಗಲ್ಯಾಂಡ್ ರಾಜ್ಯಗಳಿಗೆ ಬೇಟಿ ನೀಡಲು “ಇನ್ನರ್ ಲೈನ್ ಪರ್ಮಿಟ್” ಅಥವಾ “ಒಳಬೇಟಿ ಅನುಮತಿ” ಪಡೆದುಕೊಳ್ಳುವುದು ಕಡ್ಡಾಯ.

22. ಇತ್ತೀಚೆಗೆ ಚುನಾವಣಾ ಆಯೋಗ ದೊಡ್ಡ ರಾಜ್ಯಗಳಲ್ಲಿ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ಚುನಾವಣಾ ವೆಚ್ಚವನ್ನು ಕ್ರಮವಾಗಿ ಎಷ್ಟು ಹೆಚ್ಚಿಸಿದೆ?

ಅ) 95 ಲಕ್ಷ & 40 ಲಕ್ಷ

ಆ) 80 ಲಕ್ಷ & 45 ಲಕ್ಷ

ಇ) 75 ಲಕ್ಷ ಮತ್ತು 45 ಲಕ್ಷ

ಈ) 85 ಲಕ್ಷ 55 ಲಕ್ಷ

95 ಲಕ್ಷ & 40 ಲಕ್ಷ

ಕೇಂದ್ರೀಯ ಚುನಾವಣಾ ಆಯೋಗವು ಲೋಕಸಭೆ ಹಾಗೂ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳ ವೆಚ್ಚದ ಮಿತಿಯನ್ನು ಪರಿಷ್ಕರಿಸಿದೆ. ಲೋಕಸಭಾ ಚುನಾವಣೆಯಲ್ಲಿ ದೊಡ್ಡ ರಾಜ್ಯಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ವೆಚ್ಚದ ಮಿತಿಯನ್ನು 75 ಲಕ್ಷದಿಂದ 95 ಲಕ್ಷಕ್ಕೆ ಏರಿಕೆ ಮಾಡಲಾಗಿದೆ ಹಾಗೂ ಸಣ್ಣ ರಾಜ್ಯಗಳಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ವೆಚ್ಚದ ಮಿತಿಯನ್ನು 54 ಲಕ್ಷದಿಂದ 75 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಅದೇ ರೀತಿ ದೊಡ್ಡರಾಜ್ಯಗಳಲ್ಲಿ ಸ್ಪರ್ಧಿಸುವ ವಿಧಾನಸಭಾ ಚುನಾವಣೆಯ ಅಭ್ಯರ್ಥಿಗಳ ವೆಚ್ಚದ ಮಿತಿಯನ್ನು 28 ಲಕ್ಷದಿಂದ 40 ಲಕ್ಷಕ್ಕೆ ಹಾಗೂ ಸಣ್ಣ ರಾಜ್ಯಗಳ ಅಭ್ಯರ್ಥಿಗಳ ವೆಚ್ಚದ ಮಿತಿಯನ್ನು 20 ರಿಂದ 28 ಲಕ್ಷಕ್ಕೆ ಏರಿಕೆ ಮಾಡಲಾಗಿದೆ.

23. ಅಲಕಾ ಮಿತ್ತಲ್ ರವರು ಯಾವ ಸಂಸ್ಥೆಯ ಮೊದಲ ಮಹಿಳಾ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ONGC

ಆ) SAIL

ಇ) BEL

ಈ) Airtel

ONGC

ತೈಲ ಮತ್ತು ನೈಸರ್ಗಿಕ ಅನಿಲ ನಿಗಮದ ನೂತನ ಅಧ್ಯಕ್ಷರಾಗಿ ಆಗಿ ಅಲಕಾ ಮಿತ್ತಲ್ ರವರು ನೇಮಕಗೊಂಡಿದ್ದಾರೆ. ಮಿತ್ತಲ್ ರವರು ONGCಯ ಪ್ರಪ್ರಥಮ ಮಹಿಳಾ ಚೇರಮನ್ ಎನಿಸಿದ್ದಾರೆ.

karunaduexams.com

24. ಖ್ಯಾತ ಫುಟ್ಬಾಲ್ ಆಟಗಾರ ಕ್ರಿಸ್ಟಿಯಾನೋ ರೋನಾಲ್ಡೊ ರವರ ಪ್ರತಿಮೆಯನ್ನು ಯಾವ ರಾಜ್ಯದಲ್ಲಿ ಸ್ಥಾಪಿಸಲಾಗಿದೆ?

ಅ) ಪಂಜಾಬ್

ಆ) ಹರಿಯಾಣ

ಇ) ಗೋವಾ

ಈ) ಕೇರಳ

ಗೋವಾ

ಕ್ರಿಸ್ಟಿಯಾನೋ ರೋನಾಲ್ಡೊ ರವರ ಪ್ರತಿಮೆಯನ್ನು ಗೋವಾದಲ್ಲಿ ಸ್ಥಾಪಿಸಲಾಯಿತು. ಸ್ಥಳೀಯ ಫುಟ್ಬಾಲ್ ಆಟಗಾರರ ಪ್ರತಿಮೆಯನ್ನು ಸ್ಥಾಪಿಸಿದೆ ವಿದೇಶಿ ಆಟಗಾರನ ಪ್ರತಿಮೆಯನ್ನು ಸ್ಥಾಪಿಸಿರುವುದು ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

25. "ರಕ್ಷಣಾ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆ (DRDO)"ಯ ಸಂಸ್ಥಾಪನಾ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಜನವರಿ 3

ಆ) ಜನವರಿ 2

ಇ) ಜನವರಿ 1

ಈ) ಜನವರಿ 4

ಜನವರಿ 1

ಡಿಆರ್ ಡಿಓ ಸಂಸ್ಥಾಪನಾ ದಿನವನ್ನು ಜನವರಿ 1 ರಂದು ಆಚರಿಸಲಾಗುತ್ತದೆ. ಜನವರಿ 1, 1958 ರಂದು ಡಿಆರ್ಡಿಓ ವನ್ನು ಸ್ಥಾಪಿಸಲಾಯಿತು.

26. ಈ ಕೆಳಗಿನ ಯಾರು "ವಿಶ್ವಸಂಸ್ಥೆಯ ನಿಶ್ಯಸ್ತ್ರೀಕರಣ ಸಮ್ಮೇಳನ (United Nation Conference on Disarmament)"ದ ಭಾರತದ ಖಾಯಂ ಪ್ರತಿನಿಧಿಯಾಗಿ ನೇಮಕಗೊಂಡಿದ್ದಾರೆ?

ಅ) ಕಿರಣ್ ಜೋಷಿ

ಆ) ಅನುಪಮ್ ರೇ

ಇ) ಇಂದಿರಾ ನಾಯರ್

ಈ) ಅಮಿತ್ ಸಿಂಗ್

ಅನುಪಮ್ ರೇ

ಜಿನೀವಾದಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ನಿಶ್ಯಸ್ತ್ರೀಕರಣ ಸಮ್ಮೇಳನಕ್ಕೆ ಭಾರತದ ಖಾಯಂ ಪ್ರತಿನಿಧಿಯಾಗಿ ಹಿರಿಯ ರಾಜತಾಂತ್ರಿಕ ಅನುಪಮ್ ರೇ ಅವರನ್ನು ನೇಮಕ ಮಾಡಲಾಗಿದೆ.

27. ಯಾವ ದೇಶ ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಭಯೋತ್ಪಾದನಾ ನಿಗ್ರಹ ಸಮಿತಿಯ 2022ನೇ ವರ್ಷದ ಅಧ್ಯಕ್ಷತೆಯನ್ನು ವಹಿಸಿಕೊಂಡಿತು?

ಅ) ಭಾರತ

ಆ) ಪಾಕಿಸ್ತಾನ

ಇ) ದಕ್ಷಿಣ ಆಫ್ರಿಕಾ

ಈ) ನ್ಯೂಜಿಲ್ಯಾಂಡ್

ಭಾರತ

ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಭಯೋತ್ಪಾದನಾ ನಿಗ್ರಹ ಸಮಿತಿಯ 2022ನೇ ವರ್ಷದ ಅಧ್ಯಕ್ಷತೆಗೆ ಭಾರತ ಆಯ್ಕೆಯಾಗಿದೆ.

28. ಮುಂಬೈ ಪ್ರೆಸ್ ಕ್ಲಬ್ ನೀಡುವ  ಪ್ರತಿಷ್ಠಿತ "ರೆಡ್‌ಇಂಕ್ ವರ್ಷದ ಪತ್ರಕರ್ತ ಪ್ರಶಸ್ತಿ-2021" ಯಾರಿಗೆ ನೀಡಲಾಗಿದೆ?

ಅ) ಡ್ಯಾನಿಷ್ ಸಿದ್ದಿಕಿ

ಆ) ಅರುಣ್ ರಂಗಸ್ವಾಮಿ

ಇ) ಫಾಯೆ ಡಿಸೋಝ

ಈ) ಚೇತನ್ ನಾಡಿಗ್

ಡ್ಯಾನಿಷ್ ಸಿದ್ದಿಕಿ

ಫೋಟೋ ಜರ್ನಲಿಸ್ಟ್ ಡ್ಯಾನಿಷ್ ಸಿದ್ದಿಕಿ ರವರಿಗೆ ಮರಣೋತ್ತರವಾಗಿ ರೆಡ್‌ಇಂಕ್ ವರ್ಷದ ಪತ್ರಕರ್ತ ಪ್ರಶಸ್ತಿ-2021 ಅನ್ನು ನೀಡಲಾಯಿತು. ಸಿದ್ದಿಕಿ ರವರು ಅಫ್ಘಾನಿಸ್ತಾನದಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ವೇಳೆ ನಿಧನರಾಗಿದ್ದರು. ಹಿರಿಯ ಪತ್ರಕರ್ತ ಪೇಮ್ ಶಂಕರ್ ಝಾ ರವರಿಗೆ ರೆಡ್‌ಇಂಕ್ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

29. "ವಿಶ್ವ ಬ್ರೈಲಿ ಲಿಪಿ ದಿನ"ವನ್ನು _______ ರಂದು ಆಚರಿಸಲಾಗುತ್ತದೆ?

ಅ) ಜನವರಿ 3

ಆ) ಜನವರಿ 4

ಇ) ಜನವರಿ 7

ಈ) ಜನವರಿ 8

ಜನವರಿ 4

ಬ್ರೈಲಿ ಲಿಪಿ ಸಂಶೋಧಕ ಲೂಯಿಸ್ ಬ್ರೈಲಿ ರವರ ಜನ್ಮದಿನವನ್ನು ವಿಶ್ವ ಬ್ರೈಲಿ ಲಿಪಿ ದಿನವನ್ನಾಗಿ ಜನವರಿ 4 ರಂದು ಆಚರಿಸಲಾಗುತ್ತದೆ.

karunaduexams.com

30. 2022ರಲ್ಲಿ ಇರುವಂತೆ ಈ ಕೆಳಗಿನ ಯಾವ ಬ್ಯಾಂಕ್ ಗಳನ್ನು ಆರ್‌ಬಿಐ "ದೇಶಿಯ ವ್ಯವಸ್ಥಿತ ಪ್ರಮುಖ ಬ್ಯಾಂಕ್ ಗಳು (D-Systemically Important Banks)" ಎಂದು ಗುರುತಿಸಿದೆ?

1) ಕೆನರಾ ಬ್ಯಾಂಕ್

2) ಭಾರತೀಯ ಸ್ಟೇಟ್ ಬ್ಯಾಂಕ್

3) ಹೆಚ್ ಡಿ ಎಫ್ ಸಿ

4) ಐಸಿಐಸಿಐ

ಸರಿಯಾದ ಉತ್ತರವನ್ನು ಆಯ್ಕೆಮಾಡಿ?

ಅ) 1, 2 & 4

ಆ) 2, 3 & 4

ಇ) 1, 3 & 4

ಈ) ಮೇಲಿನ ಎಲ್ಲವೂ

2, 3 & 4

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಚ್ ಡಿ ಎಫ್ ಸಿ ಮತ್ತು ಐಸಿಐಸಿಐ ಬ್ಯಾಂಕ್ ಗಳನ್ನು ದೇಶಿಯ ವ್ಯವಸ್ಥಿಯ ಪ್ರಮುಖ ಬ್ಯಾಂಕುಗಳನ್ನಾಗಿ ಮುಂದುವರೆಸಿದೆ. ಮಾರ್ಚ್ 31, 2021ರ ಅಂತ್ಯಕ್ಕೆ ಸಂಗ್ರಹಿಸಿದ ಮಾಹಿತಿ ಆಧಾರದ ಮೇಲೆ ಮೇಲಿನ ಬ್ಯಾಂಕುಗಳು ವಿಫಲಗೊಳ್ಳಲು ತುಂಬಾ ದೊಡ್ಡದಾದ ಸಂಸ್ಥೆಗಳು ಎಂದು ಗುರುತಿಸಲಾಗಿದೆ.

31. ಈ ಕೆಳಗಿನ ಯಾವ ಸಂಸ್ಥೆ ದೇಶದ ಮೊದಲ ಓಮಿಕ್ರಾನ್ ತಳಿಯನ್ನು ಪತ್ತೆಹಚ್ಚುವ "ಓಮಿಶುರ್ (Omisure)" ಹೆಸರಿನ RT-PCR ಕಿಟ್ ಅಭಿವೃದ್ಧಿಪಡಿಸಿದೆ?

ಅ) ಸನ್ ಫಾರ್ಮ

ಆ) ರೆಡ್ಡೀಸ್ ಲ್ಯಾಬೋರೇಟರಿ

ಇ) ಟಾಟಾ ಎಂಡಿ

ಈ) ಅಬಾಟ್

ಟಾಟಾ ಎಂಡಿ

ಟಾಟಾ ಎಂಡಿ ಅಭಿವೃದ್ಧಿಪಡಿಸಿರುವ "ಓಮಿಶುರ್" ಟೆಸ್ಟ್ ಕಿಟ್ ಅನ್ನು ಕೇಂದ್ರ ಸರ್ಕಾರ ಅನುಮೋದಿಸಿದೆ. ಕರೋನಾ ಸೋಂಕಿನ ಜೊತೆಗೆ ವೈರಾಣುವಿನ ವಿಧ ಓಮಿಕ್ರಾನ್ ಆಗಿದೆಯೇ ಅಥವಾ ಅಲ್ಲವೇ ಎಂಬ ಅಂಶವನ್ನು ಸಹ ಪತ್ತೆಹಚ್ಚಬಹುದಾಗಿದೆ. ಓಮಿಕ್ರಾನ್ ತಳಿಯನ್ನು ಪತ್ತೆಹಚ್ಚುವ ದೇಶದ ಮೊದಲ RT-PCR ಕಿಟ್ ಇದಾಗಿದೆ.

32. ವಿಮಾನಯಾನ ಅನಾಲಿಟಿಕ್ಸ್ ಸಂಸ್ಥೆ "ಸಿರಿಯಮ್" ಪ್ರಕಾರ ಆನ್ ಟೈಮ್ ಕಾರ್ಯಕ್ಷಮತೆಗಾಗಿ ಟಾಪ್ 10 ಜಾಗತಿಕ ಪಟ್ಟಿಯಲ್ಲಿ ಕಾಣಿಸಿಕೊಂಡಿರುವ ಭಾರತದ ಏಕೈಕ ವಿಮಾನ ನಿಲ್ದಾಣ ಯಾವುದು?

ಅ) ಚೆನ್ನೈ ವಿಮಾನ ನಿಲ್ದಾಣ

karunaduexams.com

ಆ) ದೆಹಲಿ ವಿಮಾನ ನಿಲ್ದಾಣ

ಇ) ಬೆಂಗಳೂರು ವಿಮಾನ ನಿಲ್ದಾಣ

ಈ) ಹೆದ್ರಾಬಾದ್ ವಿಮಾನ ನಿಲ್ದಾಣ

ಚೆನ್ನೈ ವಿಮಾನ ನಿಲ್ದಾಣ

ವಿಮಾನಯಾನ ಅನಾಲಿಟಿಕ್ಸ್ ಸಂಸ್ಥೆ “ಸಿರಿಯಮ್” ಪ್ರಕಾರ ಆನ್ ಟೈಮ್ ಕಾರ್ಯಕ್ಷಮತೆಗಾಗಿ ಟಾಪ್ 10 ಜಾಗತಿಕ ಪಟ್ಟಿಯಲ್ಲಿ ಚೆನ್ನೈ ವಿಮಾನ ನಿಲ್ದಾಣ 8ನೇ ಸ್ಥಾನದಲ್ಲಿ ಕಾಣಿಸಿಕೊಂಡಿದ್ದು, ಪಟ್ಟಿಯಲ್ಲಿ ಸ್ಥಾನ ಪಡೆದ ಏಕೈಕ ವಿಮಾನ ನಿಲ್ದಾಣ ಎನಿಸಿದೆ.

33. ಈ ಕೆಳಗಿನ ಯಾರು ದಕ್ಷಿಣ ಧ್ರುವಕ್ಕೆ ಏಕಾಂಗಿಯಾಗಿ ಪ್ರವಾಸ ಕೈಗೊಂಡ ಭಾರತ ಮೂಲದ ಮೊದಲ ಮಹಿಳೆ ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ?

ಅ) ಊರ್ವಶಿ ಚಾವ್ಲಾ

ಆ) ಹರ್ ಪ್ರೀತ್ ಚಂಡಿ

ಇ) ದೇವಿಕಾ ರಾಣಿ

ಈ) ಪೂರ್ನಿಯ ಚಂಡೆಲ

ಹರ್ ಪ್ರೀತ್ ಚಂಡಿ

ಭಾರತ ಮೂಲದ ಕ್ಯಾಪ್ಟನ್ ಹರ್ ಪ್ರೀತ್ ಚಂಡಿ ಅವರು ದಕ್ಷಿಣ ಧ್ರುವಕ್ಕೆ ಏಕಾಂಗಿಯಾಗಿ ಪ್ರವಾಸ ಮಾಡುವ ಮೂಲಕ ಈ ಸಾಧನೆಗೈದ ಭಾರತ ಮೂಲದ ಪ್ರಥಮ ಮಹಿಳೆ ಎನಿಸಿದ್ದಾರೆ. ಪ್ರಸ್ತುತ ಚಂಡಿ ರವರು ಬ್ರಿಟನ್ ಸೇನೆಯಲ್ಲಿ ಫಿಸಿಯೋಥೆರಪಿಸ್ಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. 40 ದಿನಗಳಲ್ಲಿ 1127 ಕಿ.ಮೀ ಕ್ರಮಿಸುವ ಮೂಲಕ ಅವರು ಅಂಟಾರ್ಟಿಕಕ್ಕೆ ಕೈಗೊಂಡಿದ್ದ ಸಾಹಸಯಾತ್ರೆ ಪೂರ್ಣಗೊಳಿಸಿದರು.

34. ಈ ಮುಂದಿನ ಯಾರು ಪಾಕಿಸ್ತಾನ ಸುಪ್ರೀಂಕೋರ್ಟಿಗೆ ಮೊದಲ ಮಹಿಳಾ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದಾರೆ?

ಅ) ಆಯಿಷಾ ಮಲಿಕ್

ಆ) ಫೌಜಿಯ ತರನುಮ್

ಇ) ಆಯೇಷಾ ಮಲಿಕ್

ಈ) ನುಸ್ರುತ್ ಬೇಗಂ

ಆಯಿಷಾ ಮಲಿಕ್

ಲಾಹೋರ್ ಹೈಕೋರ್ಟ್ ನ ನ್ಯಾಯಮೂರ್ತಿ ಆಯಿಷಾ ಮಲಿಕ್ ರವರನ್ನು ಪಾಕಿಸ್ತಾನ ಸುಪ್ರೀಂ ಕೋರ್ಟಿನ ಮಹಿಳಾ ನ್ಯಾಯಮೂರ್ತಿಯನ್ನಾಗಿ ಆಯ್ಕೆ ಮಾಡಲಾಗಿದೆ. ಆ ಮೂಲಕ ಆಯಿಷಾ ಮಲಿಕ್ ರವರು ಪಾಕಿಸ್ತಾನ ಸುಪ್ರೀಂಕೋರ್ಟಿಗೆ ಆಯ್ಕೆಗೊಂಡ ಮೊದಲ ಮಹಿಳಾ ನ್ಯಾಯಮೂರ್ತಿ ಎನಿಸಿದ್ದಾರೆ.

35. ವಿಶ್ವ ಯುದ್ಧ ಅನಾಥರ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಜನವರಿ 4

karunaduexams.com

ಆ) ಜನವರಿ 6

ಇ) ಜನವರಿ 8

ಈ) ಜನವರಿ 9

ಜನವರಿ 6

ವಿಶ್ವ ಯುದ್ಧ ಅನಾಥರ ದಿನವನ್ನು ಜನವರಿ 6 ರಂದು ಆಚರಿಸಲಾಗುತ್ತದೆ. ಯುದ್ಧಗಳಲ್ಲಿ ಪೋಷಕರನ್ನು ಕಳೆದುಕೊಂಡ ಮಕ್ಕಳ ಸ್ಥಿತಿಗತಿಗಳ ಬಗ್ಗೆ ಜಾಗೃತಿ ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

36. ಕೇಂದ್ರ ಜಲ ಶಕ್ತಿ ಸಚಿವಾಲಯ ನೀಡುವ "ರಾಷ್ಟ್ರೀಯ ಜಲ ಪ್ರಶಸ್ತಿ"ಯು 2020ನೇ ಸಾಲಿಗೆ ಯಾವ ರಾಜ್ಯಕ್ಕೆ ಲಭಿಸಿದೆ?

ಅ) ಕರ್ನಾಟಕ

ಆ) ಉತ್ತರ ಪ್ರದೇಶ

ಇ) ಕೇರಳ

ಈ) ಗುಜರಾತ್

ಉತ್ತರ ಪ್ರದೇಶ

ಕೇಂದ್ರ ಜಲ ಶಕ್ತಿ ಸಚಿವರಾದ ಗಜೇಂದ್ರ ಸಿಂಗ್ ಶೇಖಾವತ್ ರವರು ಮೂರನೇ ರಾಷ್ಟ್ರೀಯ ಜಲ ಪ್ರಶಸ್ತಿ-2020ನೇ ಸಾಲಿಗೆ ಘೋಷಿಸಿದ್ದು, ಜಲ ಸಂರಕ್ಷಣೆಗೆ ಕೈಗೊಂಡ ಅತ್ಯುತ್ತಮ ಕಾರ್ಯಕ್ಕಾಗಿ ಉತ್ತರ ಪ್ರದೇಶ ಅತ್ಯುತ್ತಮ ರಾಜ್ಯ ಪ್ರಶಸ್ತಿಗೆ ಭಾಜನವಾಗಿದೆ.

37. ಉತ್ತರಖಂಡದ ದಾರ್ಚುಲದಲ್ಲಿ ಮಹಾಕಾಳಿ ನದಿಯ ಮೇಲೆ ಸೇತುವೆ ನಿರ್ಮಿಸುವ ಸಂಬಂಧ ಯಾವ ದೇಶದೊಂದಿಗೆ ಕೇಂದ್ರ ಸರ್ಕಾರ ಒಡಂಬಡಿಕೆಗೆ ಸಹಿ ಮಾಡಿದೆ?

ಅ) ಭೂತಾನ್

ಆ) ನೇಪಾಳ

ಇ) ಬಾಂಗ್ಲಾದೇಶ

ಈ) ಮಯನ್ಮಾರ್

ನೇಪಾಳ

ಉತ್ತರಖಂಡದ ದಾರ್ಚುಲದಲ್ಲಿ ಮಹಾಕಾಳಿ ನದಿಯ ಮೇಲೆ ಸೇತುವೆ ನಿರ್ಮಿಸುವ ಸಂಬಂಧ ನೇಪಾಳ ದೇಶದೊಂದಿಗೆ ಕೇಂದ್ರ ಸರ್ಕಾರ ಒಡಂಬಡಿಕೆಗೆ ಸಹಿ ಮಾಡಿದೆ. ಮಹಾಕಾಳಿ ನದಿ ಭಾರತ ಮತ್ತು ನೇಪಾಳವನ್ನು ಪ್ರತ್ಯೇಕಿಸುತ್ತದೆ. ಉದ್ದೇಶಿತ ಸೇತುವೆಯು ಉತ್ತರಖಂಡದಲ್ಲಿರುವ ದಾರ್ಚುಲ ಮತ್ತು ನೇಪಾಳ ಗಡಿ ಪ್ರದೇಶದೊಳಗಿರುವ ದಾರ್ಚುಲ ಅವಳಿ ನಗರಗಳನ್ನು ಸಂಪರ್ಕಿಸಲಿದೆ.

karunaduexams.com

38. ಇತ್ತೀಚೆಗೆ ನಿಧನರಾದ ಅನಾಥರ ತಾಯಿಯೆಂದು ಪ್ರಸಿದ್ಧರಾಗಿದ್ದ "ಸಿಂಧುತಾಯಿ ಸಪ್ಕಾಲ್" ಯಾವ ರಾಜ್ಯಕ್ಕೆ ಸಂಬಂಧಿಸಿದವರು?

ಅ) ರಾಜಸ್ಥಾನ

ಆ) ಮಹಾರಾಷ್ಟ್ರ

ಇ) ತಮಿಳುನಾಡು

ಈ) ತೆಲಂಗಣ

ಮಹಾರಾಷ್ಟ್ರ

ಅನಾಥ ಮಕ್ಕಳನ್ನು ಪೋಷಿಸಿ, ಅನಾಥರ ತಾಯಿಯೆಂದು ಪ್ರಸಿದ್ಧರಾಗಿದ್ದ ಸಿಂಧುತಾಯಿ ಸಪ್ಕಾಲ್ ರವರು ನಿಧನರಾದರು. ಸಾಮಾಜಿಕ ಕಾರ್ಯಕರ್ತೆಯೂ ಆಗಿದ್ದ ಇವರಿಗೆ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು. ಮಹಾರಾಷ್ಟ್ರದ ವಾರ್ದಾ ಜಿಲ್ಲೆಯಲ್ಲಿ 1948ರಲ್ಲಿ ಸಪ್ಕಾಲ್ ಜನಿಸಿದರು.

39. ಭಾರತೀಯ ರಿಸರ್ವ್ ಬ್ಯಾಂಕ್ ಇಂಟರ್ನೆಟ್ ಇಲ್ಲದಿದ್ದರೂ ಡಿಜಿಟಲ್ ಪಾವತಿಯನ್ನು ಸಾಧ್ಯವಾಗಿಸಲು ಪ್ರತಿ ವಹಿವಾಟಿನಲ್ಲಿ ಗರಿಷ್ಠ ರೂ ______ವರೆಗೆ ಪಾವತಿ ಮಾಡಲು ಅವಕಾಶ ಕಲ್ಪಿಸಿದೆ?

ಅ) ರೂ 200

ಆ) ರೂ 100

ಇ) ರೂ 500

ಈ) ರೂ 1000

ರೂ 200

ಗ್ರಾಮೀಣ ಮತ್ತು ಅರೆ ಪಟ್ಟಣ ಪ್ರದೇಶಗಳಲ್ಲಿ ಡಿಜಿಟಲ್ ವಹಿವಾಟು ಪ್ರೋತ್ಸಾಹಿಸುವ ಉದ್ದೇಶದಿಂದ ಭಾರತೀಯ ರಿಸರ್ವ್ ಬ್ಯಾಂಕ್ ಇಂಟರ್ನೆಟ್ ಇಲ್ಲದಿದ್ದರೂ ಡಿಜಿಟಲ್ ಪಾವತಿಯನ್ನು ಸಾಧ್ಯವಾಗಿಸಲು ಪ್ರತಿ ವಹಿವಾಟಿನಲ್ಲಿ ಗರಿಷ್ಠ ರೂ 200 ವರೆಗೆ ಪಾವತಿ ಮಾಡಲು ಅವಕಾಶ ಕಲ್ಪಿಸಿದೆ. ಹಣ ಪಾವತಿಸುವ ವ್ಯಕ್ತಿ ಮತ್ತು ಸ್ವೀಕರಿಸುವ ವ್ಯಕ್ತಿ ಒಂದೇ ಕಡೆ ಇದ್ದಾಗ ಮಾತ್ರ ವಹಿವಾಟು ಸಾಧ್ಯವಾಗಲಿದೆ.

40. ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (IRDAI) ಮೂರು ವಿಮಾ ಸಂಸ್ಥೆಗಳನ್ನು ದೇಶಿಯ ವ್ಯವಸ್ಥಿತ ಪ್ರಮುಖ ವಿಮಾದಾರರು (D-SIIs) ಎಂದು ಗುರುತಿಸಿದೆ. ಈ ಗುಂಪಿನಿಂದ ಹೊರಗುಳಿದ ಸಂಸ್ಥೆಯನ್ನು ಗುರುತಿಸಿ?

ಅ) ಜನರಲ್ ಇನ್ಶೂರೆನ್ಸ್ ಕಾರ್ಪೋರೇಶನ್ ಆಫ್ ಇಂಡಿಯಾ

ಆ) ಭಾರತೀಯ ಜೀವ ವಿಮಾ ನಿಗಮ

ಇ) ದಿ ನ್ಯೂ ಇಂಡಿಯಾ ಅಶ್ಯೂರನ್ಸ್ ಕಂಪನಿ

ಈ) ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್

ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್

karunaduexams.com

ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (IRDAI) ಜನರಲ್ ಇನ್ಶೂರೆನ್ಸ್ ಕಾರ್ಪೋರೇಶನ್ ಆಫ್ ಇಂಡಿಯಾ, ದಿ ನ್ಯೂ ಇಂಡಿಯಾ ಅಶ್ಯೂರನ್ಸ್ ಕಂಪನಿ ಮತ್ತು ಭಾರತೀಯ ಜೀವ ವಿಮಾ ನಿಗಮವನ್ನು ವಿಮಾ ಸಂಸ್ಥೆಗಳನ್ನು ದೇಶಿಯ ವ್ಯವಸ್ಥಿತ ಪ್ರಮುಖ ವಿಮಾದಾರರು (D-SIIs) ಎಂದು ಗುರುತಿಸಿದೆ.

41. “ಬ್ಲೂ ಬುಕ್” ಎಂಬುದು ಭಾರತದ ಪ್ರಧಾನ ಮಂತ್ರಿ ರವರ ಭದ್ರತೆಯನ್ನು ಹೇಗೆ ಕೈಗೊಳ್ಳಬೇಕು ಎಂಬ ನಿಯಮಗಳನ್ನು ಒಳಗೊಂಡಿರುವ ಸಂಗ್ರಹ. ಈ ಕೆಳಗಿನ ಯಾರು ಬ್ಲೂ ಬುಕ್ ಜಾರಿಗೊಳಿಸುವ ಹೊಣೆ ಹೊಂದಿರುತ್ತಾರೆ?

ಅ) ವಿಶೇಷ ಭದ್ರತಾ ದಳ

ಆ) ಗಡಿ ಭದ್ರತಾ ಪಡೆ

ಇ) ಗೃಹ ಸಚಿವಾಲಯ

ಈ) ಸಂಬಂಧಪಟ್ಟ ರಾಜ್ಯ ಸರ್ಕಾರ

ವಿಶೇಷ ಭದ್ರತಾ ಪಡೆ

ಬ್ಲೂ ಬುಕ್ ಎಂಬುದು ಪ್ರಧಾನ ಮಂತ್ರಿಯವರು ಭದ್ರತೆಯನ್ನು ಹೇಗೆ ಕೈಗೊಳ್ಳಬೇಕು ಎಂಬ ನಿಯಮಗಳನ್ನು ಒಳಗೊಂಡಿದ್ದು, ಈ ನಿಯಮಗಳನ್ನು ಜಾರಿಗೊಳಿಸುವ ಹೊಣೆಯು ಪ್ರಧಾನ ಮಂತ್ರಿಯವರ ರಕ್ಷಣಾ ಜವಾಬ್ದಾರಿಯನ್ನು ಹೊಂದಿರುವ ವಿಶೇಷ ಭದ್ರತಾ ದಳ (ಎಸ್ ಪಿ ಜಿ)ದ್ದು ಆಗಿರುತ್ತದೆ.

42. ಪ್ರಧಾನ ಮಂತ್ರಿ-ಪೋಷಣ್ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಅಕ್ಷಯ ಪಾತ್ರ ಫೌಂಡಶೇಷನ್ ಯಾವ ಸಂಸ್ಥೆಯೊಂದಿಗೆ ಕೈಜೋಡಿಸಿದೆ?

ಅ) ವಿಶ್ವ ಬ್ಯಾಂಕ್

ಆ) ಏಷ್ಯಾ ಅಭಿವೃದ್ಧಿ ಬ್ಯಾಂಕ್

ಇ) ಯೂನಿಸೆಫ್

ಈ) ವಿಶ್ವಸಂಸ್ಥೆ-ಡಬ್ಲೂಎಫ್ ಪಿ

ವಿಶ್ವಸಂಸ್ಥೆ-ಡಬ್ಲೂಎಫ್ ಪಿ

ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮ (WFP) ಪ್ರಧಾನ ಮಂತ್ರಿ ಪೋಷಣ ಶಕ್ತಿ ನಿರ್ಮಾಣ್ (PM-POSHAN) ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅಕ್ಷಯ ಪಾತ್ರ ಫೌಂಡೇಶನ್‌ನೊಂದಿಗೆ ಕೈಜೋಡಿಸಿದೆ. ವಿಶ್ವ ಆಹಾರ ಕಾರ್ಯಕ್ರಮವು ಶಾಲಾ ಪೋಷಣೆಯನ್ನು ಬೆಂಬಲಿಸುವಲ್ಲಿ ಮತ್ತು ಮಕ್ಕಳಲ್ಲಿ ಪೌಷ್ಟಿಕಾಂಶವನ್ನು ಸುಧಾರಿಸುವಲ್ಲಿ 6 ದಶಕಗಳಿಗೂ ಹೆಚ್ಚು ಅನುಭವವನ್ನು ಹೊಂದಿದೆ. ಪ್ರಧಾನ ಮಂತ್ರಿ ಪೋಷಣ್ ಶಕ್ತಿ ನಿರ್ಮಾಣ್ ಭಾರತ ಸರ್ಕಾರದ ಪ್ರಮುಖ ಕಾರ್ಯಕ್ರಮವಾಗಿದ್ದು, ಮಕ್ಕಳು, ಗರ್ಭಿಣಿಯರು ಮತ್ತು ಹಾಲುಣಿಸುವ ತಾಯಂದಿರಿಗೆ ಪೌಷ್ಟಿಕಾಂಶದ ಫಲಿತಾಂಶಗಳನ್ನು ಸುಧಾರಿಸಲು ಜಾರಿಗೆ ತರಲಾಗಿದೆ.

karunaduexams.com

43. ಹಾಲಿವುಡ್ ನಟ ಲಿಯೊನಾರ್ಡೊ ಡಿಕಾಪ್ರಿಯೊ ಅವರ ಹೆಸರಿನಿಂದ ಕರೆಯಲ್ಪಡುವ "Uvariopsis dicaprio" ಒಂದು _____?

ಅ) ಮರ

ಆ) ಪ್ರಾಣಿ

ಇ) ಆಕಾಶ ಕಾಯ

ಈ) ನೃತ್ಯ ಕಲೆ

ಮರ

ಕ್ಯಾಮರೂನ್‌ನಲ್ಲಿ ಪತ್ತೆಹಚ್ಚಲಾಗಿರುವ ಉಷ್ಣವಲಯದ, ನಿತ್ಯಹರಿದ್ವರ್ಣ ಮರಕ್ಕೆ ಹಾಲಿವುಡ್ ನಟ ಲಿಯೊನಾರ್ಡೊ ಡಿಕಾಪ್ರಿಯೊ ಹೆಸರನ್ನು ಇಡಲಾಗಿದೆ. ತೀವ್ರವಾಗಿ ಅಳಿವಿನಂಚಿನಲ್ಲಿರುವ ಈ ಮರವನ್ನು ಸಂರಕ್ಷಿಸಲು ರಕ್ಷಿಸಲು ಪ್ರಚಾರದ ಪ್ರಯತ್ನಗಳನ್ನು ಗುರುತಿಸಲು 'ಯುವರಿಯೊಪ್ಸಿಸ್ ಡಿಕಾಪ್ರಿಯೊ' ಎಂದು ಹೆಸರಿಸಲಾಗಿದೆ. ಇಲ್ಲಿಯವರೆಗೂ ಮರದ ಬಗ್ಗೆ ವಿಜ್ಞಾನಕ್ಕಾಗಲಿ ಮತ್ತು ಸ್ಥಳೀಯ ಸಮುದಾಯಗಳಿಗೆ ತಿಳಿದಿರಲಿಲ್ಲ.

44. ಇತ್ತೀಚೆಗೆ ನಿಧನರಾದ ಸಿಡ್ನಿ ಪಾಯಿಟರ್ ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಸಿನಿಮಾ

ಆ) ಪರಿಸರ ಸಂರಕ್ಷಣೆ

ಇ) ವೈದ್ಯಕೀಯ

ಈ) ಬಾಹ್ಯಕಾಶ

ಸಿನಿಮಾ

ಹಾಲಿವುಡ್ ನ ಮೇರುನಟ ಹಾಗೂ ಆಸ್ಕರ್ ಪ್ರಶಸ್ತಿ ಪಡೆದ ಮೊದಲ ಕಪ್ಪು ಜನಾಂಗೀಯ ನಟ ಸಿಡ್ನಿ ಪಾಯಿಟರ್ ನಿಧನರಾದರು. ಪಾಯಿಟರ್ ಅವರು "ಲಿಲ್ಲೀಸ್ ಆಫ್ ದಿ ಫೀಲ್ಡ್" ಚಿತ್ರಕ್ಕಾಗಿ ಆಸ್ಕರ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.

45. ಈ ಕೆಳಗಿನ ಯಾರು ಜರ್ಮನಿಯ ನೂತನ ಚಾನ್ಸಲರ್ ಆಗಿ ನೇಮಕಗೊಂಡಿದ್ದಾರೆ?

ಅ) ಆಡಲ್ಫ್ ರೂಲ್

ಆ) ಒಲಾಫ್ ಶೋಲ್ಜ್

ಇ) ಹೆಲ್ಮಟ್ ಕೋಲ್

ಈ) ಡೇವಿಡ್ ಶೆಲ್ಪ್

ಒಲಾಫ್ ಶೋಲ್ಜ್

ಒಲಾಫ್ ಶೋಲ್ಜ್ ರವರು ಜರ್ಮನಿಯ ನೂತನ ಚಾನ್ಸಲರ್ ಆಗಿ ನೇಮಕಗೊಂಡಿದ್ದಾರೆ.

karunaduexams.com

46. ಯಾವ ದಿನವನ್ನು "ವೀರ ಬಾಲ ದಿವಸ" ಆಗಿ ಪ್ರಸಕ್ತ ವರ್ಷದಿಂದ ಆಚರಿಸಲಾಗುವುದು?

ಅ) ಜನವರಿ 11

ಆ) ಫೆಬ್ರವರಿ 28

ಇ) ಡಿಸೆಂಬರ್ 26

ಈ) ನವೆಂಬರ್ 11

ಡಿಸೆಂಬರ್ 26

ಪ್ರಸಕ್ತ ವರ್ಷದಿಂದ ಡಿಸೆಂಬರ್ 26 ಅನ್ನು ವೀರ ಬಾಲ ದಿವಸ ಆಗಿ ಆಚರಿಸಲಾಗುವುದೆಂದು ಪ್ರಧಾನಿ ಮೋದಿ ಘೋಷಿಸಿದ್ದಾರೆ. 10ನೇ ಸಿಖ್ ಗುರು ಗೋವಿಂದ್ ಸಿಂಗ್ ಅವರ ನಾಲ್ಕು ಪುತ್ರರ ಸ್ಮರಣಾರ್ಥ ಈ ದಿನವನ್ನು ವೀರ ಬಾಲ ದಿವಸವೆಂದು ಆಚರಿಸಲಾಗುವುದು. ಗುರು ಗೋವಿಂದ್ ಸಿಂಗ್ ಮಕ್ಕಳಾದ ಸಾಹಿಬ್ಜಾದಾ ಜೋರಾವರ್ ಸಿಂಗ್ ಜಿ ಮತ್ತು ಸಾಹಿಬ್ಜಾದಾ ಫಾತೇಹ್ ಸಿಂಗ್ ಜಿ ರವರನ್ನು ಜೀವಂತವಾಗಿ ಹೂತೂ ಹಾಕಿದ ದಿನ ಇದಾಗಿದೆ.

47. ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಅಂದಾಜಿನ ಪ್ರಕಾರ ಭಾರತದ ಆರ್ಥಿಕ ಬೆಳವಣಿಗೆ ದರವು ಪ್ರಸ್ತುತ ವರ್ಷದಲ್ಲಿ ಎಷ್ಟಿರಲಿದೆ?

ಅ) ಶೇ 9.0

ಆ) ಶೇ 9.2

ಇ) ಶೇ 7.8

ಈ) ಶೇ 8.9

ಶೇ 9.2

ರಾಷ್ಟ್ರೀಯ ಸಾಂಖ್ಯಿಕ ಕಚೇರಿ ಅಂದಾಜಿನ ಪ್ರಕಾರ ಭಾರತದ ಆರ್ಥಿಕ ಬೆಳವಣಿಗೆ ದರವು ಪ್ರಸ್ತುತ ವರ್ಷದಲ್ಲಿ ಶೇ 9.2 ರಷ್ಟು ಇರಲಿದೆ.

48. "ಏಷ್ಯಾ ಮೂಲಸೌಕರ್ಯ ಹೂಡಿಕೆ ಬ್ಯಾಂಕ್ (AIIB)"ನ ನೂತನ ಉಪಾಧ್ಯಕ್ಷರಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ಊರ್ಜಿತ್ ಪಟೇಲ್

ಆ) ಶಶಿಕಾಂತ್ ದಾಸ್

ಇ) ಕೆ ಸುಬ್ರಮಣಿಯನ್

ಈ) ರವೀಶ್ ಸಿಂಗ್

ಊರ್ಜಿತ್ ಪಟೇಲ್

ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ಊರ್ಜಿತ್ ಪಟೇಲ್ ರವರು ಏಷ್ಯಾ ಮೂಲಸೌಕರ್ಯ ಹೂಡಿಕೆ ಬ್ಯಾಂಕಿನ ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಏಷ್ಯಾ ಮೂಲಸೌಕರ್ಯ ಹೂಡಿಕೆ

karunaduexams.com

ಬ್ಯಾಂಕಿನ ಕೇಂದ್ರ ಕಚೇರಿ ಬೀಜಿಂಗ್ ನಲ್ಲಿದೆ. ಭಾರತ ಈ ಬ್ಯಾಂಕಿನ ಸಂಸ್ಥಾಪಕ ಸದಸ್ಯ ರಾಷ್ಟ್ರವಾಗಿದ್ದು, ಚೀನಾ ನಂತರ ಹೆಚ್ಚಿನ ಪಾಲು ಹೊಂದಿದೆ.

49.ವಿಶ್ವ ಹಿಂದಿ ದಿವಸ _________?

ಅ) ಜನವರಿ 5

ಆ) ಜನವರಿ 10

ಇ) ಜನವರಿ 8

ಈ) ಜನವರಿ 9

ಜನವರಿ 10

ವಿಶ್ವ ಹಿಂದಿ ದಿವಸವನ್ನು ಜನವರಿ 10 ರಂದು ಆಚರಿಸಲಾಗುತ್ತದೆ. ಜನವರಿ 10, 1975 ರಲ್ಲಿ ನಾಗಪುರದಲ್ಲಿ ಮೊದಲ ವಿಶ್ವ ಹಿಂದಿ ಸಮ್ಮೇಳನ ಆಯೋಜನೆಯ ಸ್ಮರಣಾರ್ಥ ಈ ದಿನವನ್ನು ವಿಶ್ವ ಹಿಂದಿ ದಿವಸವೆಂದು ಆಚರಿಸಲಾಗುತ್ತಿದೆ.

50. ವಿದೇಶಿ ದೇಣಿಗೆ ನಿಯಂತ್ರಣ ಕಾಯಿದೆ (FCRA) 2010ರಡಿ ವಿದೇಶಿ ದೇಣಿಗೆ ಸ್ವೀಕರಿಸಲು ನೋಂದಾಯಿಸಿಕೊಳ್ಳುವ ಎನ್ ಜಿಒಗಳು ಪ್ರತಿ ಎಷ್ಟು ವರ್ಷಕ್ಕೊಮ್ಮೆ ವಿಶಿಷ್ಟ FCRA ನೋಂದಣಿ ಸಂಖ್ಯೆಯನ್ನು ನವೀಕರಿಸಿಕೊಳ್ಳಬೇಕು?

ಅ) 2

ಆ) 4

ಇ) 5

ಈ) 10

5

ವಿದೇಶಿ ದೇಣಿಗೆ ನಿಯಂತ್ರಣ ಕಾಯಿದೆ (FCRA) 2010ರಡಿ ವಿದೇಶಿ ದೇಣಿಗೆ ಸ್ವೀಕರಿಸಲು ನೋಂದಾಯಿಸಿಕೊಳ್ಳುವ ಎನ್ ಜಿಒಗಳು ಪ್ರತಿ 5 ವರ್ಷಕ್ಕೊಮ್ಮೆ ವಿಶಿಷ್ಟ FCRA ನೋಂದಣಿ ಸಂಖ್ಯೆಯನ್ನು ನವೀಕರಿಸಿಕೊಳ್ಳಬೇಕು.

Karunaduexams.com

51. ಇತ್ತೀಚೆಗೆ ಬಿಡುಗಡೆಗೊಂಡ ಭಾರತದ ಅರಣ್ಯ ವಸ್ತುಸ್ಥಿತಿ ವರದಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ದೇಶದ ಅರಣ್ಯ ಮತ್ತು ಮರಗಳ ವ್ಯಾಪ್ತಿ ಕಳೆದ ಎರಡು ವರ್ಷಕ್ಕಿಂತ 2,261 ಚದರ ಕಿಲೋಮಿಟರ್ ಗಳಷ್ಟು ಹೆಚ್ಚಾಗಿದೆ

2) ರಾಜ್ಯಗಳ ಪೈಕಿ ಕರ್ನಾಟಕದಲ್ಲಿ ಇತರೆ ರಾಜ್ಯಗಳಿಗಿಂತ ಅತಿ ಹೆಚ್ಚು ಅರಣ್ಯಪ್ರದೇಶ ವೃದ್ಧಿಯಾಗಿದೆ

ಮೇಲ್ಕಂಡ ಯಾವ ಹೇಳಿಕೆ ಸರಿಯಾಗಿದೆ?

ಅ) ಹೇಳಿಕೆ ಒಂದು

ಆ) ಹೇಳಿಕೆ ಎರಡು

ಇ) 1 & 2 ಹೇಳಿಕೆ ಸರಿಯಾಗಿವೆ

ಈ) 1 & 2 ಹೇಳಿಕೆ ತಪ್ಪಿವೆ

ಹೇಳಿಕೆ ಒಂದು

ಭಾರತದ ಅರಣ್ಯ ವರದಿ ಬಿಡುಗಡೆಗೊಂಡಿದ್ದು ದೇಶದ ಅರಣ್ಯ ಮತ್ತು ಮರಗಳ ವ್ಯಾಪ್ತಿ ಕಳೆದ ಎರಡು ವರ್ಷಕ್ಕಿಂತ 2,261 ಚದರ ಕಿಲೋಮಿಟರ್ ಗಳಷ್ಟು ಹೆಚ್ಚಾಗಿದೆ. ಆಂಧ್ರಪ್ರದೇಶದಲ್ಲಿ ಅತಿ ಹೆಚ್ಚು 647 ಚದರ ಕಿಲೋಮೀಟರ್ ಅರಣ್ಯ ಪ್ರದೇಶ ಹೆಚ್ಚಾಗಿದೆ. ತೆಲಂಗಣ, ಕರ್ನಾಟಕ, ಜಾರ್ಖಂಡ್ ಮತ್ತು ಓಡಿಶಾ ರಾಜ್ಯಗಳಲ್ಲಿ ಕ್ರಮವಾಗಿ ಅರಣ್ಯ ಪ್ರದೇಶ ಹೆಚ್ಚಾಗಿದೆ.

52. ಗ್ಲೋಬಲ್ ಪ್ರೈವೇಟ್ ಬ್ಯಾಂಕಿಂಗ್ ಅವಾರ್ಡ್-2021ರಲ್ಲಿ ಯಾವ ಬ್ಯಾಂಕ್ ದೇಶದ ಅತ್ಯುತ್ತಮ ಖಾಸಗಿ ಬ್ಯಾಂಕ್ ಎಂದು ಗುರುತಿಸಲಾಗಿದೆ?

ಅ) ಐಸಿಐಸಿಐ

ಆ) ಹೆಚ್ ಡಿ ಎಫ್ ಸಿ

ಇ) ಆಕ್ಸಿಸ್ ಬ್ಯಾಂಕ್

ಈ) ಕೋಟಕ್ ಮಹೀಂದ್ರ ಬ್ಯಾಂಕ್

ಹೆಚ್ ಡಿ ಎಫ್ ಸಿ

ಗ್ಲೋಬಲ್ ಪ್ರೈವೇಟ್ ಬ್ಯಾಂಕಿಂಗ್ ಅವಾರ್ಡ್ಸ್ 2021 ರಲ್ಲಿ HDFC ಬ್ಯಾಂಕ್ ಅನ್ನು ಭಾರತದ ಅತ್ಯುತ್ತಮ ಖಾಸಗಿ ಬ್ಯಾಂಕ್ ಎಂದು ಗುರುತಿಸಲಾಗಿದೆ.

53. ಇತ್ತೀಚೆಗೆ ಸುದ್ದಿಯಲ್ಲಿದ್ದ "ದರ್ವಾಜಾ ಗ್ಯಾಸ್ ಕ್ರೇಟರ್ (Darvaza Gas Crater)" ಅಥವಾ "ಗೇಟ್ ವೇ ಟು ಹೆಲ್" ಎನ್ನುವ ಸ್ಥಳ ಯಾವ ದೇಶದಲ್ಲಿದೆ?

ಅ) ಕಝಾಕಸ್ತಾನ್

ಆ) ತುರ್ಕಮೆನಿಸ್ತಾನ್

ಇ) ಆಫ್ಘಾನಿಸ್ತಾನ

karunaduexams.com

ಈ) ಬಾಂಗ್ಲಾದೇಶ

ತುರ್ಕಮೆನಿಸ್ತಾನ್

ದರ್ವಾಜಾ ಗ್ಯಾಸ್ ಕ್ರೇಟರ್ ಅಥವಾ ಗೇಟ್ ವೇ ಟು ಹೆಲ್ ಹೆಸರಿನಿಂದ ಕರೆಯಲ್ಪಡುವ ಸ್ಥಳ ತುರ್ಕುಮೆನಿಸ್ತಾನದ ಕಾರಕಮ್ ಮರುಭೂಮಿಯಲ್ಲಿದೆ. ಇದೊಂದು ದೊಡ್ಡ ನೈಸರ್ಗಿಕ ಅನಿಲ ಕುಳಿಯಾಗಿದ್ದು 50 ವರ್ಷಗಳಿಂದ ಈ ಕುಳಿಯಲ್ಲಿ ಬೆಂಕಿ ಉರಿಯುತ್ತಿದೆ. ತುರ್ಕಮೆನಿಸ್ತಾನ್ ಅಧ್ಯಕ್ಷ ಗುರ್ಬಾನ್ಗುಲಿ ಬೆರ್ಡಿಮುಖಮೆಡೊವ್ ಅವರು ದರ್ವಾಜಾ ಅನಿಲ ಕುಳಿಯಲ್ಲಿ ಬೆಂಕಿಯನ್ನು ನಂದಿಸಲು ತಜ್ಞರ ಸಮಿತಿ ರಚನೆ ಮಾಡಿದ ಕಾರಣ ಈ ಪ್ರದೇಶ ಸುದ್ದಿಯಲ್ಲಿತ್ತು.

54. ಮೊದಲ ವಿಶ್ವ ಕಿವುಡ T20 ಕ್ರಿಕೆಟ್ ಚಾಂಪಿಯನ್‌ಶಿಪ್ 2023 ರಲ್ಲಿ ಭಾರತದ ಯಾವ ರಾಜ್ಯದಲ್ಲಿ ಆಯೋಜಿಸಲಾಗುವುದು?

ಅ) ಕೇರಳ

ಆ) ತಮಿಳುನಾಡು

ಇ) ಕರ್ನಾಟಕ

ಈ) ಮಹಾರಾಷ್ಟ್ರ

ಕೇರಳ

ಮೊದಲ ವಿಶ್ವ ಕಿವುಡ ಟಿ-20 ಕ್ರಿಕೆಟ್ ಚಾಂಪಿಯನ್ ಶಿಪ್ 2023ರಲ್ಲಿ ಕೇರಳದ ತಿರುವನಂತಪುರದಲ್ಲಿ 2023 ಜನವರಿ 10 ರಿಂದ 20 ರವರೆಗೆ ನಡೆಯಲಿದೆ.

55. ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಅಂಡರ್ 19 ಬ್ಯಾಡ್ಮಿಂಟನ್ ಆಟಗಾರರ ರಾಂಕಿಂಗ್ ಪಟ್ಟಿಯಲ್ಲಿ ನಂಬರ್ 1 ಪಡೆದ ದೇಶದ ಮೊದಲ ಆಟಗಾರ್ತಿ ಯಾರು?

ಅ) ತಸ್ನಿಮ್ ಮೀರ್

ಆ) ಪ್ರಣೀತಾ ಜೋಷಿ

ಇ) ತೇಜಸ್ವಿ ಸಿಂಗ್

ಈ) ಜೋಶ್ವಾ ಚಂದ್ರು

ತಸ್ನಿಮ್ ಮೀರ್

ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಅಂಡರ್ 19 ಬ್ಯಾಡ್ಮಿಂಟನ್ ಆಟಗಾರರ ರ್ಯಾಂಕಿಂಗ್ ಪಟ್ಟಿ ಬಿಡುಗಡೆಯಾಗಿದ್ದು ಭಾರತದ ತಸ್ನಿಮ್ ಮಿರ್ ನಂಬರ್ 1 ಸ್ಥಾನವನ್ನು ಅಲಂಕರಿಸುವ ಮೂಲಕ ಈ ಸಾಧನೆ

Karunaduexams.com

ಮಾಡಿದ ದೇಶದ ಮೊದಲ ಆಟಗಾರ್ತಿ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.16 ವರ್ಷದ ತಸ್ನಿಮ್ ಮೀರ್ ಒಟ್ಟು 10,810 ಪಾಯಿಂಟ್ಸ್‌ಗಳನ್ನು ಕಲೆ ಹಾಕುವ ಮೂಲಕ ಈ ಸಾಧನೆ ಮಾಡಿದ್ದಾರೆ.

56. ಕರಡು ರಾಷ್ಟ್ರೀಯ ವಾಯು ಕ್ರೀಡಾ ನೀತಿಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

1) ರಾಷ್ಟ್ರೀಯ ವಾಯು ಕ್ರೀಡಾ ನೀತಿಯು 2030ರ ವೇಳೆಗೆ ಭಾರತವನ್ನು ವಾಯು ಕ್ರೀಡೆಯಲ್ಲಿ ಅಗ್ರಸ್ಥಾನದಲ್ಲಿರಿಸುವ ಗುರಿ ಹೊಂದಿದೆ
2) ನೀತಿಯಡಿ "ಏರ್ ಸ್ಪೋರ್ಟ್ಸ್ ಫೆಡರೇಶನ್ ಆಫ್ ಇಂಡಿಯಾ"ವನ್ನು ಆಡಳಿಯ ಮಂಡಳಿಯಾಗಿ ಸ್ಥಾಪಿಸಲಾಗುವುದು.

ಮೇಲ್ಕಂಡ ಯಾವ ಹೇಳಿಕೆ ಸರಿಯಾಗಿದೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಹೇಳಿಕೆ 1 & 2 ಸರಿ

ಆ) ಹೇಳಿಕೆ 1 & 2 ತಪ್ಪು

ಹೇಳಿಕೆ 1 & 2 ಸರಿ

ರಾಷ್ಟ್ರೀಯ ವಾಯು ಕ್ರೀಡಾ ನೀತಿಯು 2030ರ ವೇಳೆಗೆ ಭಾರತವನ್ನು ವಾಯು ಕ್ರೀಡೆಯಲ್ಲಿ ಅಗ್ರಸ್ಥಾನದಲ್ಲಿರಿಸುವ ಗುರಿ ಹೊಂದಿದೆ. ನೀತಿಯಡಿ "ಏರ್ ಸ್ಪೋರ್ಟ್ಸ್ ಫೆಡರೇಶನ್ ಆಫ್ ಇಂಡಿಯಾ"ವನ್ನು ಆಡಳಿಯ ಮಂಡಳಿಯಾಗಿ ಸ್ಥಾಪಿಸಲಾಗುವುದು.

57. ಸುಪ್ರೀಂ ಕೋರ್ಟ್ ಇತ್ತೀಚೆಗೆ ರಚಿಸಿರುವ ನ್ಯಾಯಮೂರ್ತಿ ಇಂದು ಮಲ್ಹೋತ್ರ ಸಮಿತಿ ಯಾವುದಕ್ಕೆ ಸಂಬಂಧಿಸಿದೆ?

ಅ) ಉತ್ತರ ಖಂಡ ದ್ವೇಷ ಭಾಷಣ

ಆ) ಪ್ರಧಾನ ಮಂತ್ರಿ ಭದ್ರತಾ ಲೋಪ

ಇ) ಸೈನಿಕರಿಂದ ನಾಗಲ್ಯಾಂಡ್ ಜನರ ಹತ್ಯೆ

ಈ) ಚುನಾವಣೆ ಪ್ರಚಾರದಿಂದ ಕೋವಿಡ್ ಹರಡುವಿಕೆ

ಪ್ರಧಾನ ಮಂತ್ರಿ ಭದ್ರತಾ ಲೋಪ

ಪಂಜಾಬ್ ಭೇಟಿ ವೇಳೆ ಪ್ರಧಾನಿ **ನರೇಂದ್ರ ಮೋದಿ** ಅವರ ಭದ್ರತೆಯಲ್ಲಿ ಲೋಪ ಉಂಟಾದ ಪ್ರಕರಣದ ತನಿಖೆಗೆ, ನಿವೃತ್ತ ನ್ಯಾಯಮೂರ್ತಿ ಇಂದು ಮಲ್ಹೋತ್ರ ಅವರ ನೇತೃತ್ವದದಲ್ಲಿ ಸುಪ್ರೀಂ ಕೋರ್ಟ್ ಸಮಿತಿ ರಚನೆ ಮಾಡಿದೆ.ಇಂದು ಮಲ್ಹೋತ್ರ ಅವರು ಸಮಿತಿಯ ನೇತೃತ್ವ ವಹಿಸಲಿದ್ದು, ರಾಷ್ಟ್ರೀಯ ತನಿಖಾ ದಳದ ನಿರ್ದೇಶಕರು, ಪಂಜಾಬ್ ಭದ್ರತೆಯ ನಿರ್ದೇಶಕರು ಹಾಗೂ ಪಂಜಾಬ್ ಹಾಗೂ ಹರ್ಯಾಣ ಹೈ ಕೋರ್ಟ್‌ನ ರಿಜಿಸ್ಟ್ರಾರ್ ಈ ಸಮಿತಿಯ ಸದಸ್ಯರಾಗಿರಲಿದ್ದಾರೆ.

karunaduexams.com

58. ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಎಸ್ ಸೋಮನಾಥನ್ ರವರು ಇಸ್ರೋದ ಎಷ್ಟನೇ ಅಧ್ಯಕ್ಷರು?

ಅ) ಏಳು

ಆ) ಎಂಟು

ಇ) ಹತ್ತು

ಈ) ಹನ್ನೆರಡು

ಹತ್ತು

ಹಿರಿಯ ರಾಕೆಟ್ ವಿಜ್ಞಾನಿ ಎಸ್ ಸೋಮನಾಥನ್ ರವರು ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆಯ ಹತ್ತನೇ ಅಧ್ಯಕ್ಷರಾಗಿ ಹಾಗೂ ಬಾಹ್ಯಕಾಶ ಇಲಾಖೆಯ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ.

59. ಹೆನ್ಲಿ & ಪಾರ್ಟನರ್ಸ್ ಹೊರತಂದಿರುವ ಪಾಸ್ ಪೋರ್ಟ್ ಸೂಚ್ಯಂಕ 2022 ರಲ್ಲಿ ಜಗತ್ತಿನ ಅತ್ಯಂತ ಶಕ್ತಿಶಾಲಿ ಪಾಸ್ ಪೋರ್ಟ್ ಹೊಂದಿರುವ ದೇಶ ಯಾವುದು?

ಅ) ಜಪಾನ್

ಆ) ಆಸ್ಟ್ರೇಲಿಯಾ

ಇ) ನಾರ್ವೆ

ಈ) ಫ್ರಾನ್ಸ್

ಜಪಾನ್

ಹೆನ್ಲಿ ಮತ್ತು ಪಾರ್ಟನರ್ಸ್ ಹೊರತಂದಿರುವ ವಿಶ್ವದ ಪ್ರಭಾವಿ ಪಾಸ್ ಪೋರ್ಟ್ ಸೂಚ್ಯಂಕರಲ್ಲಿ ಜಪಾನ್ ಮತ್ತು ಸಿಂಗಾಪುರ ಪ್ರಥಮ ಸ್ಥಾನವನ್ನು ಪಡೆದುಕೊಂಡಿವೆ. ಈ ಸೂಚ್ಯಂಕದಲ್ಲಿ ಭಾರತ 83ನೇ ಸ್ಥಾನದಲ್ಲಿದೆ. ಅಫ್ಘಾನಿಸ್ತಾನ ಕೊನೆಯ ಸ್ಥಾನದಲ್ಲಿದೆ.

60. "Indomitable-A Working Woman's Notes on Life, Work and LeadershiP" ಇದು ಯಾರ ಆತ್ಮಕಥನ?

ಅ) ಚಂದಾ ಕೊಚ್ಚರ್

ಆ) ಅರುಂಧತಿ ಭಟ್ಟಾಚಾರ್ಯ

ಇ) ಗೀತಾ ಗೋಪಿನಾಥನ್

ಈ) ಸುಧಾಮಣಿ

ಅರುಂಧತಿ ಭಟ್ಟಾಚಾರ್ಯ

"Indomitable-A Working Woman's Notes on Life, Work and LeadershiP"ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮಾಜಿ ಮುಖ್ಯಸ್ಥೆ ಅರುಂಧತಿ ಭಟ್ಟಾಚಾರ್ಯರವರ ಆತ್ಮಕಥನ. ಅರುಂಧತಿ ಭಟ್ಟಾಚಾರ್ಯ ರವರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮೊದಲ ಮಹಿಳಾ ಮುಖ್ಯಸ್ಥೆ.

61. ಭಾರತೀಯ ರೈಲ್ವೆಯ ಪಶ್ಚಿಮ ರೈಲ್ವೆ ವಿಭಾಗ ಪ್ರಯಾಣಿಕರು ತಮ್ಮ ಕಳೆದುಹೋದ ಲಗೇಜ್ ಸುಲಭವಾಗಿ ಮರಳಿ ಪಡೆಯಲು ಯಾವ ಸೇವೆಯನ್ನು ಜಾರಿಗೆ ತಂದಿದೆ?

ಅ) ಪ್ರಾಜೆಕ್ಟ್ ಅಮಾನತ್

ಆ) ಪ್ರಾಜೆಕ್ಟ್ ಸುಲಭ್

ಇ) ಪ್ರಾಜೆಕ್ಟ್ ಮಿಸ್ಸಿಂಗ್

ಈ) ಪ್ರಾಜೆಕ್ಟ್ ರಿಟರ್ನ್

ಪ್ರಾಜೆಕ್ಟ್ ಅಮಾನತ್

ರೈಲಿನಲ್ಲಿ ಪ್ರಯಾಣಿಸುವಾಗ ಪ್ರಯಾಣಿಕರ ಲಗ್ಗೇಜ್ ಕಳೆದು ಹೋದಲ್ಲಿ ಸುಲಭವಾಗಿ ಮರಳಿ ಪಡೆಯಲು ಪಶ್ಚಿಮ ರೈಲ್ವೆ/ರೈಲ್ವೆ ರಕ್ಷಣಾ ಪಡೆ ಪ್ರಾಜೆಕ್ಟ್ ಅಮಾನತ್ ಎಂಬ ವಿನೂತನ ಕಾರ್ಯಕ್ರಮವನ್ನು ಜಾರಿಗೆ ತಂದಿದೆ.

62. ಈ ಕೆಳಗಿನ ಯಾರು ಅಂತರಾಷ್ಟ್ರೀಯ ಆರ್ಥಿಕ ನಿಧಿ (ಐಎಂಎಫ್)ನ ನೂತನ ಮುಖ್ಯ ಆರ್ಥಿಕ ತಜ್ಞರಾಗಿ ನೇಮಕಗೊಂಡಿದ್ದಾರೆ?

ಅ) ಡೇವಿಡ್ ಬೆಕಮ್

ಆ) ಬ್ಲೇಕ್ ಡೇವಿಸ್

ಇ) ಪಿಯರ್-ಒಲಿವಿಯರ್ ಗೌರ್ನಿಂಕಾಸ್

ಈ) ಜೋಕಸ್ ಕ್ರಿಸ್ಟ್

ಪಿಯರ್-ಒಲಿವಿಯರ್ ಗೌರ್ನಿಂಕಾಸ್

ಫ್ರೆಂಚ್ ಮೂಲದ ಅರ್ಥಶಾಸ್ತ್ರಜ್ಞ ಪಿಯರ್-ಒಲಿವಿಯರ್ ಗೌರ್ನಿಂಕಾಸ್ ರವರನು ಅಂತರಾಷ್ಟ್ರೀಯ ಹಣಕಾಸು ನಿಧಿಯ ಮುಂದಿನ ಮುಖ್ಯ ಆರ್ಥಿಕ ತಜ್ಞರಾಗಿ ನೇಮಕಗೊಂಡಿದ್ದಾರೆ.ಐಎಂಎಫ್ ನ ಮೊದಲ ಮಹಿಳಾ ಮುಖ್ಯ ಅರ್ಥಶಾಸ್ತ್ರಜ್ಞರಾಗಿ ಸೇವೆ ಸಲ್ಲಿಸಿದ ಗೀತಾ ಗೋಪಿನಾಥ್ ಅವರ ಉತ್ತರಾಧಿಕಾರಿಯಾಗಿ ಗೌರ್ನಿಂಕಾಸ್ ಕಾರ್ಯನಿರ್ವಹಿಸಲಿದ್ದಾರೆ. ಗೋಪಿನಾಥ್ ಅವರು ಜನವರಿ ೨೧ ರಿಂದ ಐಎಂಎಫ್ ನ ಮೊದಲ ಉಪ ವ್ಯವಸ್ಥಾಪಕ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

63. ಇತ್ತೀಚೆಗೆ ಬಿಡುಗಡೆಯಾದ "ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್" 2021 ವರದಿಯ ಪ್ರಕಾರ ಅರಣ್ಯವು ದೇಶದ ಭೌಗೋಳಿಕ ಪ್ರದೇಶದ ಶೇಕಡಾ ಎಷ್ಟು ಭಾಗವನ್ನು ಒಳಗೊಂಡಿದೆ?

ಅ) 23.75%

ಆ) 24.60%

ಇ) 22.16%

ಈ) 25.2%

24.60%

Karunaduexams.com

ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು 13 ಜನವರಿ 2022 ರಂದು "ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್" 2021 ಅನ್ನು ಬಿಡುಗಡೆ ಮಾಡಿದರು. 2021 ರಲ್ಲಿ, ಭಾರತದ ಒಟ್ಟು ಅರಣ್ಯ ಮತ್ತು ಮರಗಳ ವ್ಯಾಪ್ತಿ 80.9 ದಶಲಕ್ಷ ಹೆಕ್ಟೇರ್ ಆಗಿದೆ. ಇದು ದೇಶದ ಭೌಗೋಳಿಕ ಪ್ರದೇಶದ ಶೇಕಡಾ 24.60% ಕ್ಕಿಂತ ಹೆಚ್ಚಾಗಿದೆ.

64. ಯಾವ ಸಂಸ್ಥೆ ಅಮೆರಿಕದ ನ್ಯೂಯಾರ್ಕ್ ನಗರದಲ್ಲಿನ ಪ್ರಮುಖ ಐಷರಾಮಿ ಹೋಟೆಲ್ ' ಮ್ಯಾಂಡರಿನ್ ಓರಿಯೆಂಟಲ್ ಫೈವ್ ಸ್ಟಾರ್"ನ್ನು ಖರೀದಿಸಿದೆ?

ಅ) ಟಾಟಾ

ಆ) ರಿಲಯನ್ಸ್ ಇಂಡಸ್ಟ್ರೀಸ್

ಇ) ಆದಿತ್ಯಾ ಬಿರ್ಲಾ

ಈ) ವಿಪ್ರೋ

ರಿಲಯನ್ಸ್ ಇಂಡಸ್ಟ್ರೀಸ್

ಮುಖೇಶ್ ಅಂಬಾನಿ ಒಡೆತನದ ರಿಲಯನ್ಸ್ ಇಂಡಸ್ಟ್ರೀಸ್ ನ್ಯೂಯಾರ್ಕ್ ನ 80 ಕೊಲಂಬಸ್ ಸರ್ಕಲ್ ಪ್ರದೇಶದಲ್ಲಿನ ಕ್ಯಾಪಿಟಲ್ ಆಫ್ ಕೊಲಂಬಸ್ ಸೆಂಟರ್ ಕಾರ್ಪೋರೇಷನ್ ಮಾಲಿಕತ್ವದ ಐಕಾನಿಕ್ ಐಷಾರಾಮಿ ಹೋಟೆಲ್ ಮಾಂಟ್ರಿಯಲ್ ಓರಿಯೆಂಟಲ್ ನ ಶೇ. 73.37 ರಷ್ಟು ಷೇರುಗಳನ್ನು 98.15 ಮಿಲಿಯನ್ ಡಾಲರ್ ಗಳಿಗೆ ಖರೀದಿಸಿದೆ.

65. 25ನೇ ರಾಷ್ಟ್ರೀಯ ಯುವಜನ ಉತ್ಸವದ ಆತಿಥ್ಯ ವಹಿಸಿರುವ ನಗರ ಯಾವುದು?

ಅ) ಪುದುಚೇರಿ

ಆ) ಭೂಪಾಲ್

ಇ) ಚೆನ್ನೈ

ಈ) ಶಿಲ್ಲಾಂಗ್

ಪುದುಚೇರಿ

ಪ್ರಧಾನಮಂತ್ರಿ ಶ್ರೀನರೇಂದ್ರ ಮೋದಿ ಅವರು 2022ರ ಜನವರಿ 12ರಂದು ಪುದುಚೇರಿಯಲ್ಲಿ 25ನೇ ರಾಷ್ಟ್ರೀಯ ಯುವಜನೋತ್ಸವವನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ಘಾಟಿಸಿದರು. ಸ್ವಾಮಿ ವಿವೇಕಾನಂದರ ಜನ್ಮ ದಿನವಾದ ಈ ದಿನವನ್ನು ರಾಷ್ಟ್ರೀಯ ಯುವ ದಿನವಾಗಿ ಆಚರಿಸಲಾಗುತ್ತದೆ.

66. "ಶಾಂಘೈ ಸಹಕಾರ ಸಂಸ್ಥೆಯ (ಎಸ್ ಸಿಒ)" ನೂತನ ಪ್ರಧಾನ ಕಾರ್ಯದರ್ಶಿಯಾಗಿ ಯಾರು ನೇಮಕಗೊಂಡಿದ್ದಾರೆ?

ಅ) ರೆನಿಟ್ ನೈಬೋರ್ಗ್

ಆ) ಮಾರಿಯ ಎಲಿಸ

ಇ) ಚಾಂಗ್ ಮಿಂಗ್

ಈ) ವ್ಲಾದಿಮಿರ್ ನೊರೊವ್

ಜಾಂಗ್ ಮಿಂಗ್

ಚೀನಾದ ಹಿರಿಯ ರಾಜತಾಂತ್ರಿಕ ಜಾಂಗ್ ಮಿಂಗ್ ಅವರು ಶಾಂಘೈ ಸಹಕಾರ ಸಂಸ್ಥೆಯ (ಎಸ್ ಸಿಒ) ಹೊಸ ಪ್ರಧಾನ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಜಾಂಗ್ ರವರು ಜನವರಿ ೧ ರಿಂದ ಉಜ್ಬೇಕಿಸ್ತಾನದ ಮಾಜಿ ವಿದೇಶಾಂಗ ಸಚಿವ ವ್ಲಾದಿಮಿರ್ ನೊರೊವ್ ಅವರಿಂದ ಮೂರು ವರ್ಷಗಳ ಅವಧಿಗೆ ಅಧಿಕಾರ ವಹಿಸಿಕೊಂಡಿದ್ದಾರೆ.

67. ಯಾವ ಸಂಸ್ಥೆ ಭಾರತದಲ್ಲಿ ರಾಷ್ಟ್ರೀಯ ಕ್ಷಯ ನಿರ್ಮೂಲನೆ ಕಾರ್ಯಕ್ರಮವನ್ನು ಬೆಂಬಲಿಸಲು ಕೈಜೋಡಿಸಿದೆ?

ಅ) ONGC

ಆ) SAIL

ಇ) IOCL

ಈ) BHEL

IOCL

ಇಂಡಿಯನ್ ಆಯಿಲ್ ಕಾರ್ಪೋರೇಶನ್ ಲಿಮಿಟೆಡ್ ದೇಶದಲ್ಲಿ ಕ್ಷಯ ನಿರ್ಮೂಲನೆ ಮಾಡಲು ಬೆಂಬಲ ನೀಡಲಿದೆ. ಐಒಸಿಎಲ್ ಮತ್ತು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಟಿಬಿ ಮುಕ್ತ ಭಾರತ ಜನ ಆಂದೋಲನವನ್ನು ಸಹಯೋಗದಲ್ಲಿ ಹಮ್ಮಿಕೊಳ್ಳಲಿವೆ.

68. ದೇಶದ ಮೊದಲ "ಜಲ ಮೆಟ್ರೋ ಯೋಜನೆ" ಯಾವ ನಗರದಲ್ಲಿದೆ ಆರಂಭಿಸಲಾಗಿದೆ?

ಅ) ಕೊಚ್ಚಿ

ಆ) ಪಣಜಿ

ಇ) ಚೆನ್ನೈ

ಈ) ಉಡುಪಿ

ಕೊಚ್ಚಿ

ಕೇರಳದ ಕೊಚ್ಚಿ ನಗರದಲ್ಲಿ ಬ್ಯಾಟರಿ ಚಾಲಿತ ಎಲೆಕ್ಟ್ರಿಕ್ ದೋಣಿಗಳನ್ನು ಪ್ರಾರಂಭಿಸುವ ಮೂಲಕ ದೇಶದ ಮೊದಲ ಜಲ ಮೆಟ್ರೋ ಯೋಜನೆಯನ್ನು ಹೊಂದಿದ ನಗರ ಎನಿಸಿತು. ಕೊಚ್ಚಿ ಮೆಟ್ರೋ ರೈಲು ಲಿಮಿಟೆಡ್ ಅಡಿಯಲ್ಲಿ ಕಾರ್ಯನಿರ್ವಹಿಸುವ ಈ ಯೋಜನೆಯು 76 ಕಿ.ಮೀ. ವ್ಯಾಪ್ತಿಯ 10 ದ್ವೀಪಗಳನ್ನು 78 ವಿದ್ಯುತ್ ಚಾಲಿತ ದೋಣಿಗಳಿಂದ ಸಂಪರ್ಕಿಸುತ್ತದೆ.

69. ಈ ಕೆಳಗಿನ ಯಾರು "ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್(ICHR)"ನ ನೂತನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ರಘುವೇಂದ್ರ ತನ್ವರ್

ಆ) ಪ್ರೇಮಲತಾ ಕೌಶಿಕ್

ಇ) ಅರ್ಜುನ್ ಸಿಂಗ್

karunaduexams.com

ಈ) ರಾಮಚಂದ್ರ ಗುಹ

ರಘುವೇಂದ್ರ ತನ್ವರ್

ಪ್ರೊಫೆಸರ್ ರಘುವೇಂದ್ರ ತನ್ವರ್ ಅವರನ್ನು ಇತ್ತೀಚೆಗೆ ಭಾರತೀಯ ಐತಿಹಾಸಿಕ ಸಂಶೋಧನಾ ಮಂಡಳಿಯ (ಐಸಿಎಚ್ಆರ್) ಅಧ್ಯಕ್ಷರನ್ನಾಗಿ ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ. ಐತಿಹಾಸಿಕ ಸಂಶೋಧನೆಗೆ ನಿರ್ದೇಶನಗಳನ್ನು ನೀಡುವುದು ಮತ್ತು ಇತಿಹಾಸದ ವಸ್ತುನಿಷ್ಠ ಮತ್ತು ವೈಜ್ಞಾನಿಕ ಬರವಣಿಗೆಯನ್ನು ಪ್ರೋತ್ಸಾಹಿಸುವುದು ಐಸಿಎಚ್ಆರ್ ಗುರಿಯಾಗಿದೆ.

70. ಇತ್ತೀಚೆಗೆ ಸುದ್ದಿಯಲ್ಲಿರುವ "ಹೈದ್ರಾಬಾದ್ ಘೋಷಣೆ (Hyderabad Declaration)" ಇದಕ್ಕೆ ಸಂಬಂಧಿಸಿದೆ _________?

ಅ) ಸಿನಿಮಾ ನಿರ್ಮಾಣ

ಆ) ನದಿ ಜೋಡಣೆ

ಇ) ಇ-ಆಡಳಿತ

ಈ) ಸೈಬರ್ ಭದ್ರತೆ

ಇ-ಆಡಳಿತ

ಆಡಳಿತ ಸುಧಾರಣೆ ಮತ್ತು ಸಾರ್ವಜನಿಕ ಕುಂದುಕೊರತೆಗಳ ಇಲಾಖೆ (ಡಿಎಪಿಆರ್ ಜಿ), ಸಾರ್ವಜನಿಕ ಕುಂದುಕೊರತೆಗಳು ಮತ್ತು ಪಿಂಚಣಿ ಸಚಿವಾಲಯ ಮತ್ತು ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (ಎಂಇಐಟಿವೈ) ಹಾಗೂ ತೆಲಂಗಾಣ ಸರ್ಕಾರದ ಸಹಯೋಗದೊಂದಿಗೆ ಹೈದರಾಬಾದ್ ನಲ್ಲಿ ಇ-ಆಡಳಿತ ಕುರಿತ 24ನೇ ರಾಷ್ಟ್ರೀಯ ಸಮಾವೇಶವನ್ನು ಆಯೋಜಿಸಿಲಾಗಿತ್ತು. ಈ ಸಮಾವೇಶದಲ್ಲಿ ಹೈದ್ರಾಬಾದ್ ಘೋಷಣೆಯನ್ನು ಅಂಗೀಕರಿಸಲಾಯಿತು.

71. ಯಾವ ಸಂಸ್ಥೆ ಎರಡನೇ ಹಂತದ "ಪಾಸ್ ಪೋರ್ಟ್ ಸೇವಾ" ಕಾರ್ಯಕ್ರಮದಡಿ ಸೇವೆಯನ್ನು ಒದಗಿಸಲಿದೆ?

ಅ) ಇನ್ಫೋಸಿಸ್

ಆ) ಟಿಸಿಎಸ್

ಇ) ವಿಪ್ರೋ

ಈ) ಐಬಿಎಮ್

ಟಿಸಿಎಸ್

ವಿದೇಶಾಂಗ ವ್ಯವಹಾರಗಳ ಸಚಿವಾಲಯವು (ಎಂಇಎ) ಪಾಸ್ ಪೋರ್ಟ್ ಸೇವಾ ಕಾರ್ಯಕ್ರಮದ ಎರಡನೇ ಹಂತಕ್ಕೆ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಅನ್ನು ಆಯ್ಕೆ ಮಾಡಿದೆ. 2008ರಲ್ಲಿ ಪರಿಚಯಿಸಲಾದ ಮೊದಲ ಹಂತದ ಪಾಸ್ ಪೋರ್ಟ್ ಸೇವೆಯನ್ನು ಟಿಸಿಎಸ್ ಯಶಸ್ವಿಯಾಗಿ ಜಾರಿಗೆ ತಂದಿತ್ತು. ಪಾಸ್ ಪೋರ್ಟ್

karunaduexams.com

ಸಂಬಂಧಿತ ಸೇವೆಗಳ ವಿತರಣೆಯನ್ನು ಸುಧಾರಿಸುವುದು, ಪ್ರಕ್ರಿಯೆಗಳನ್ನು ಡಿಜಿಟಲೀಕರಣ ಮಾಡುವುದು ಮತ್ತು ಪಾರದರ್ಶಕತೆ ಸುಧಾರಿಸುವ ಜವಬ್ದಾರಿ ಟಿಸಿಎಸ್ ಸಂಸ್ಥೆ ಮೇಲಿದೆ.

72. ಇತ್ತೀಚೆಗೆ ದೂರ ಸಂಪರ್ಕ ಇಲಾಖೆ ಆರನೇ ತಲೆಮಾರಿನ ಅಥವಾ 6ಜಿ ತಂತ್ರಜ್ಞಾನ ಅಭಿವೃದ್ದಿ ಸಂಬಂಧ ಆರು ಟಾಸ್ಕ್ ಪೋರ್ಸ್ ಗಳನ್ನು ರಚಿಸಿದೆ. ಅವುಗಳಲ್ಲಿ ಅಂತರಾಷ್ಟ್ರೀಯ ಗುಣಮಟ್ಟಕ್ಕೆ ಸಂಬಂಧಿಸಿದ ಟಾಸ್ಕ್ ಪೋರ್ಸ್ ನ ಅಧ್ಯಕ್ಷರು ಯಾರು?

ಅ) ಎನ್ ಜಿ ಸುಬ್ರಮಣಿಯನ್

ಆ) ಭಾಸ್ಕರ್ ರಾಮಮೂರ್ತಿ

ಇ) ಕಿರಣ್ ಕುಮಾರ್ ಕುಚಿ

ಈ) ಅಭಯ್ ಕರಂಡಿಕರ್

ಎನ್ ಜಿ ಸುಬ್ರಮಣಿಯನ್

ದೂರ ಸಂಪರ್ಕ ಇಲಾಖೆ ಆರನೇ ತಲೆಮಾರಿನ ಅಥವಾ 6ಜಿ ತಂತ್ರಜ್ಞಾನ ಅಭಿವೃದ್ದಿ ಸಂಬಂಧ ಆರು ಟಾಸ್ಕ್ ಪೋರ್ಸ್ ಗಳನ್ನು ರಚಿಸಿದೆ. ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ)-ಚೆನ್ನೈ ನ ನಿರ್ದೇಶಕ ಭಾಸ್ಕರ್ ರಾಮಮೂರ್ತಿ ರವರು ಮುಂದಿನ ಪೀಳಿಗೆಯ ನೆಟ್ ವರ್ಕ್ ಗಳು, ಐಐಟಿ-ಕಾನ್ಪುರದ ನಿರ್ದೇಶಕ ಅಭಯ್ ಕರಂಡಿಕರ್ ರವರು ಸ್ಪೆಕ್ಟ್ರಂ ನೀತಿ, ಭಾರತೀಯ ವಿಜ್ಞಾನ ಸಂಸ್ಥೆ (ಐಐಸಿ) ಬೆಂಗಳೂರು ನಿರ್ದೇಶಕ ಭಾರದ್ವಾಜ್ ಅಮ್ರೂಟರ್ ರವರು ಬಹು ಆಯಾಮದ ನಾವೀನ್ಯ ಪರಿಹಾರಗಳು ಮತ್ತು ಐಐಟಿ-ಹೈದರಾಬಾದ್ ನ ನಿರ್ದೇಶಕ ಕಿರಣ್ ಕುಮಾರ್ ಕುಚಿ ರವರು ಸಾಧನಗಳ ಕುರಿತ ಕಾರ್ಯಪಡೆಗಳ ನೇತೃತ್ವವಹಿಸಿದ್ದಾರೆ. ಅಂತರಾಷ್ಟ್ರೀಯ ಗುಣಮಟ್ಟ ಸಂಬಂಧಿಸಿದ ಕಾರ್ಯಪಡೆಯ ನೇತೃತ್ವವನ್ನು ಎನ್ ಜಿ ಸುಬ್ರಮಣಿಯನ್, ಮುಖ್ಯಸ್ಥರು ದೂರಸಂಪರ್ಕ ಗುಣಮಟ್ಟ ಅಭಿವೃದ್ದಿ ಸೊಸೈಟಿ ರವರು ವಹಿಸಿಕೊಂಡಿದ್ದಾರೆ.

73. ಇತ್ತೀಚೆಗೆ ಕ್ರಿಕೆಟ್ ಆಟಕ್ಕೆ ವಿದಾಯ ಹೇಳಿದ ಆಟಗಾರರು ಮತ್ತು ಅವರು ಪ್ರತಿನಿಧಿಸಿದ ದೇಶವನ್ನು ಈ ಕೆಳಗೆ ನೀಡಿದೆ. ಇವುಗಳಲ್ಲಿ ತಪ್ಪಾಗಿರುವುದನ್ನು ಗುರುತಿಸಿದೆ?

ಅ) ಮೊಹಮ್ಮದ್ ಹಫೀಜ್ – ಪಾಕಿಸ್ತಾನ

ಆ) ಕ್ರಿಸ್ ಮೋರಿಸ್ – ದಕ್ಷಿಣ ಆಫ್ರಿಕಾ

ಇ) ರಾಸ್ ಟೇಲರ್ – ಇಂಗ್ಲೆಂಡ್

ಈ) ಭಾನುಕ ರಾಜಪಕ್ಷ – ಶ್ರೀಲಂಕಾ

ರಾಸ್ ಟೇಲರ್ – ಇಂಗ್ಲೆಂಡ್

ರಾಸ್ ಟೇಲರ್ ರವರು ನ್ಯೂಜಿಲ್ಯಾಂಡ್ ತಂಡದ ಆಟಗಾರ.

karunaduexams.com

74. ಕೆಳಗಿನ ಹೇಳಿಕೆಗಳನ್ನು ಗಮನಿಸಿ:

1) ಚೀನಾದ ಹೊಸ ಭೂ ಗಡಿ ಕಾನೂನು ಜನವರಿ 1, 2022 ರಿಂದ ಜಾರಿಗೆ ಬಂದಿದೆ

2) ನೆರೆ ರಾಷ್ಟ್ರಗಳ ಪೈಕಿ ಭಾರತದೊಂದಿಗೆ ಚೀನಾ ಅತಿ ಉದ್ದದ ಗಡಿ ಹೊಂದಿದೆ

3) ಭಾರತ ಮತ್ತು ಚೀನಾ ದೇಶಗಳು 3488 ಕಿ.ಮೀ ಉದ್ದದ ಗಡಿ ಹಂಚಿಕೊಂಡಿವೆ

ಸರಿಯಾದ ಉತ್ತರವನ್ನು ಗುರುತಿಸಿ?

ಅ) 1 & 2

ಆ) 1 & 3

ಇ) 2 & 3

ಈ) ಮೇಲಿನ ಎಲ್ಲವೂ

1 & 3

ಚೀನಾ ತನ್ನ ಹೊಸ ಭೂ ಗಡಿ ಕಾನೂನು ಅನುಮೋದಿಸಿದ್ದು, ಜನವರಿ 1, 2022 ರಿಂದ ಜಾರಿಗೆ ಬಂದಿದೆ. ಮಂಗೋಲಿಯಾ ಮತ್ತು ರಷ್ಯಾ ನಂತರ ಚೀನಾ ಅತಿ ಉದ್ದನೆಯ ಗಡಿಯನ್ನು ಹೊಂದಿರುವುದು ಭಾರತದೊಂದಿಗೆ. ಭಾರತ ಮತ್ತು ಚೀನಾ ದೇಶಗಳು 3488 ಕಿ.ಮೀ ಉದ್ದದ ಗಡಿ ಹಂಚಿಕೊಂಡಿವೆ.

75. ಇತ್ತೀಚೆಗೆ ಮುಕ್ತಾಯವಾದ “ಭಾರತ ಕೌಶಲ್ಯ ಸ್ಪರ್ಧೆ-2021 (India Skill Competation)”ರಲ್ಲಿ ಅಗ್ರಸ್ಥಾನ ಪಡೆದ ರಾಜ್ಯ ಯಾವುದು?

ಅ) ಕೇರಳ

ಆ) ಗುಜರಾತ್

ಇ) ಒಡಿಶಾ

ಈ) ಮಹಾರಾಷ್ಟ್ರ

ಒಡಿಶಾ

ಭಾರತ ಕೌಶಲ್ಯ ಸ್ಪರ್ಧೆ-2021ರಲ್ಲಿ ಒಡಿಶಾ ರಾಜ್ಯ ಅಗ್ರಸ್ಥಾನ ಪಡೆದುಕೊಂಡಿತು. ಒಡಿಶಾ ರಾಜ್ಯದಿಂದ 51 ಸ್ಪರ್ಧಿಗಳು ಪ್ರಶಸ್ತಿ ಗೆಲ್ಲುವ ಮೂಲಕ ಅಗ್ರಸ್ಥಾನ ಪಡೆದುಕೊಂಡರೆ ಎರಡನೇ ಸ್ಥಾನವನ್ನು ಮಹಾರಾಷ್ಟ್ರ (30) ಮತ್ತು ಮೂರನೇ ಸ್ಥಾನವನ್ನು ಕೇರಳ (25) ಪಡೆದುಕೊಂಡಿತ್ತು.

76. ಕೆಳಗಿನ ಹೇಳಿಕೆಗಳನ್ನು ಗಮನಿಸಿ

1) ಪಾಂಗಾಂಗ್ ಸರೋವರ ಭಾರತ ಮತ್ತು ಚೀನಾ ನಡುವಿನ ವಿವಾದಿತ ಪ್ರದೇಶವಾಗಿದೆ

2) ಪಶ್ಚಿಮ ಲಡಾಖಿನಲ್ಲಿರುವ ಪಾಂಗಾಂಗ್ ವಿಶ್ವದ ಅತಿ ಎತ್ತರದ ಉಪ್ಪು ಸರೋವರ

ಸರಿಯಾದ ಉತ್ತರವನ್ನು ಕೋಡ್ ಮೂಲಕ ಗುರುತಿಸಿ

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡೂ ಹೇಳಿಕೆಗಳು ಸರಿ

ಈ) ಎರಡೂ ಹೇಳಿಕೆಗಳು ತಪ್ಪು

Karunaduexams.com

ಹೇಳಿಕೆ ಒಂದು ಮಾತ್ರ

ಪಾಂಗಾಂಗ್ ಸರೋವರ ಭಾರತ ಮತ್ತು ಚೀನಾ ನಡುವಿನ ವಿವಾದಿತ ಪ್ರದೇಶವಾಗಿದೆ. ಪಾಂಗಾಂಗ್ ಸರೋವರ ಪೂರ್ವ ಲಡಾಖ್ ಭಾಗದಲ್ಲಿದೆ. 4350ಮೀ ಎತ್ತರದಲ್ಲಿರುವ ಇದು ವಿಶ್ವದ ಅತಿ ಎತ್ತರದ ಉಪ್ಪು ಸರೋವರ.

77. ಯಾವ ದಿನವನ್ನು "ರಾಷ್ಟ್ರೀಯ ನವೋದಯ ದಿನ"ವೆಂದು ಆಚರಿಸಲಾಗುವುದು?

ಅ) ಜನವರಿ 10

ಆ) ಜನವರಿ 16

ಇ) ಫೆಬ್ರುವರಿ 1

ಈ) ಮಾರ್ಚ್ 15

ಜನವರಿ 16

ಪ್ರಧಾನಿ ನರೇಂದ್ರ ಮೋದಿ ರವರು ಪ್ರತಿ ವರ್ಷ ಜನವರಿ 16 ರನ್ನು ರಾಷ್ಟ್ರೀಯ ನವೋದಯ ದಿನವೆಂದು ಆಚರಿಸಲಾಗುವುದೆಂದು ಘೋಷಿಸಿದ್ದಾರೆ.

78. "ಡೇನಿಯಲ್ ಒರ್ಟೆಗಾ" ರವರು ಸತತ ನಾಲ್ಕನೇ ಅವಧಿಗೆ ಯಾವ ದೇಶದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ?

ಅ) ನಿಕಾರಗುವಾ

ಆ) ಬ್ರೆಜಿಲ್

ಇ) ಇಥೋಪಿಯಾ

ಈ) ಈಕ್ವೆಡರ್

ನಿಕಾರಗೂವಾ

ಡೇನಿಯಲ್ ಒರ್ಟೆಗಾ ರವರು ನಿಕರಾಗುವಾ ಅಧ್ಯಕ್ಷರಾಗಿ ಸತತ ನಾಲ್ಕನೇ ಅವಧಿಗೆ ಪ್ರಮಾಣ ವಚನ ಸ್ವೀಕರಿಸಿದ್ದಾರೆ.76 ವರ್ಷ ವಯಸ್ಸಿನ ಒರ್ಟೆಗಾ ರವರು 2007 ರಿಂದ ನಿಕರಾಗುವಾ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

79. 74ನೇ ಸೇನಾ ದಿನಾಚರಣೆಯ ಅಂಗವಾಗಿ ವಿಶ್ವದ ಅತಿದೊಡ್ಡ ಖಾದಿ ರಾಷ್ಟ್ರಧ್ವಜವನ್ನು ಭಾರತೀಯ ಸೇನೆ ಎಲ್ಲಿ ಪ್ರದರ್ಶಿಸಿತು?

ಅ) ಅಮೃತ್ ಸರ್

ಆ) ಲೋಂಗೇವಾಲ

ಇ) ಬಿಕನೇರ್

ಈ) ಲೂಧಿಯಾನ

ಲೋಂಗೇವಾಲ

74ನೇ ಸೇನಾ ದಿನಾಚರಣೆಯ ಅಂಗವಾಗಿ ವಿಶ್ವದ ಅತಿದೊಡ್ಡ ಖಾದಿ ರಾಷ್ಟ್ರಧ್ವಜವನ್ನು ಭಾರತೀಯ ಸೇನೆ ರಾಜಸ್ಥಾನದ ಲೋಂಗೇವಾಲದಲ್ಲಿ ಪ್ರದರ್ಶಿಸಿತು.

karunaduexams.com

80. ಯಾವ ದೇಶ ಭಾರತದಿಂದ “ಬ್ರಹ್ಮೋಸ್” ಕ್ಷಿಪಣಿಯನ್ನು ಖರೀದಿಸಲು ಒಪ್ಪಂದಕ್ಕೆ ಸಹಿ ಹಾಕಿದೆ?

ಅ) ಶ್ರೀಲಂಕಾ

ಆ) ಫಿಲಿಫೈನ್ಸ್

ಇ) ಇಂಡೋನೇಷಿಯಾ

ಈ) ಮಾರಿಷಸ್

ಫಿಲಿಫೈನ್ಸ್

ಭಾರತದಿಂದ ಬ್ರಹ್ಮೋಸ್ ಕ್ಷಿಪಣಿಯನ್ನು ಖರೀದಿಸಲು ಫಿಲಿಫೈನ್ಸ್ ಒಪ್ಪಂದ ಸಹಿ ಹಾಕಿದೆ. ಭಾರತ ಮತ್ತು ರಷ್ಯಾ ಜಂಟಿಯಾಗಿ ಅಭಿವೃದ್ದಿಪಡಿಸಿರುವ ಬ್ರಹ್ಮೋಸ್ ಕ್ಷಿಪಣಿಯನ್ನು ರೂ 2800 ಕೋಟಿ ನೀಡಿ ಫಿಲಿಫೈನ್ಸ್ ಖರೀದಿಸಲಿದೆ.

81. 2022 ಹಾಗೂ 2023ರ ಐಪಿಎಲ್ ನ ಶೀರ್ಷಿಕೆ ಪ್ರಾಯೋಜಕತ್ವದ ಒಪ್ಪಂದವನ್ನು ಯಾವ ಸಂಸ್ಥೆ ಪಡೆದುಕೊಂಡಿದೆ?

ಅ) ಟಾಟಾ

ಆ) ಸ್ಯಾಮಸಂಗ್

ಇ) ರಿಲಯನ್ಸ್

ಈ) ಕಿಯಾ

ಟಾಟಾ

2022 ಹಾಗೂ 2023ರ ಐಪಿಎಲ್ ನ ಶೀರ್ಷಿಕೆ ಪ್ರಾಯೋಜಕತ್ವದ ಒಪ್ಪಂದವನ್ನು ವಿವೋ ಕಂಪನಿ ಟಾಟಾ ಗೆ ವರ್ಗಾವಣೆ ಮಾಡಿದ್ದು, ಮುಂದಿನ ಎರಡು ಆವೃತ್ತಿಯ ಐಪಿಎಲ್ ಗಳು ಟಾಟಾ ಐಪಿಎಲ್ (TATA IPL) ಹೆಸರಿನಿಂದ ಕರೆಯಿಸಿಕೊಳ್ಳುತ್ತದೆ.

82. ಇತ್ತೀಚೆಗೆ ಭಾರತದ ಯಾವ ನೆರೆ ದೇಶ ತನ್ನ ಪ್ರಪ್ರಥಮ “ರಾಷ್ಟ್ರೀಯ ಭದ್ರತಾ ನೀತಿ” ಜಾರಿಗೊಳಿಸಿದೆ?

ಅ) ಶ್ರೀಲಂಕಾ

ಆ) ಬಾಂಗ್ಲಾದೇಶ

ಇ) ಪಾಕಿಸ್ತಾನ

ಈ) ಚೀನಾ

ಪಾಕಿಸ್ತಾನ

ಪಾಕಿಸ್ತಾನ ತನ್ನ ಪ್ರಪ್ರಥಮ ರಾಷ್ಟ್ರೀಯ ಭದ್ರತಾ ನೀತಿಯನ್ನು ಜಾರಿಗೆ ತಂದಿದೆ. 100 ಪುಟಗಳ ರಾಷ್ಟ್ರೀಯ ನೀತಿಯು ನಾಗರೀಕ ಕೇಂದ್ರವಾಗಿದೆ ಎಂದು ಬಣ್ಣಿಸಲಾಗಿದೆ.

karunaduexams.com

83. ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ-2022 ರ ಪುರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿಯನ್ನು ಗೆದ್ದುವರು ಯಾರು?

ಅ) ಲಕ್ಷ್ಯ ಸೇನ್

ಆ) ಕಿಡಂಬಿ ಶ್ರೀಕಾಂತ್

ಇ) ಲೋಹ್ ಕಿನ್ ಯೂವ್

ಈ) ಪರುಪಳ್ಳಿ ಕಶ್ಯಪ್

ಲಕ್ಷ್ಯ ಸೇನ್

ಭಾರತದ ಲಕ್ಷ್ಯಸೇನ್ ರವರು ವಿಶ್ವ ಚಾಂಪಿಯನ್ ಸಿಂಗಾಪುರದ ಲೋಹ್ ಕಿನ್ ಯೂವ್ ರವರನ್ನು ಮಣಿಸುವ ಮೂಲಕ ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿ-2022 ರ ಪುರುಷರ ಸಿಂಗಲ್ಸ್ ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು.

84. ಇತ್ತೀಚೆಗೆ ನಡೆದ PASSEX ಭಾರತ ಮತ್ತು _____ ದೇಶದ ನಡುವಿನ ಮಿಲಿಟರಿ ಅಭ್ಯಾಸವಾಗಿದೆ?

ಅ) ಅಮೆರಿಕ

ಆ) ರಷ್ಯಾ

ಇ) ಸಿಂಗಾಪುರ

ಈ) ಜಪಾನ್

ರಷ್ಯಾ

ಭಾರತ ಮತ್ತು ರಷ್ಯಾ ನಡುವೆ PASSEX ಮಿಲಿಟರಿ ಸಮರಭ್ಯಾಸ ಅರಬ್ಬಿ ಸಮುದ್ರದಲ್ಲಿ ನಡೆಯಿತು. ಭಾರತದ ಐಎನ್ಎಸ್ ಕೊಚ್ಚಿ ಹಾಗೂ ರಷ್ಯಾದ ಅಡ್ಮಿರಲ್ ಟ್ರಿಬಟ್ಸ್ ಈ ಸಮರಭ್ಯಾಸದಲ್ಲಿ ಭಾಗವಹಿಸಿದ್ದವು.

85. "ಕಚೈ ನಿಂಬೆ ಉತ್ಸವ (Kachai Lemon Festival)" ಯಾವ ರಾಜ್ಯಕ್ಕೆ ಸಂಬಂಧಿಸಿದೆ?

ಅ) ಮಿಜೋರಾಂ

ಆ) ಮಹಾರಾಷ್ಟ್ರ

ಇ) ಅಸ್ಸಾಂ

ಈ) ಮಣಿಪುರ

ಮಣಿಪುರ

ಮಣಿಪುರದ ಪ್ರಸಿದ್ಧ 'ಕಚೈ ನಿಂಬೆ' ಪಾರಂಪರಿಕ ಉತ್ಸವದ 18ನೇ ಆವೃತ್ತಿಗೆ ಉಖ್ರುಲ್‌ನಲ್ಲಿ ಚಾಲನೆ ನೀಡಲಾಗಿದೆ. ಸುರಕ್ಷಿತ ಪರಿಸರ ಮತ್ತು ಗ್ರಾಮೀಣ ಪರಿವರ್ತನೆಗಾಗಿ, ಎರಡು ದಿನಗಳ ಕಾಲದ ಸಾವಯವ 'ಕಚೈ ನಿಂಬೆ' ಉತ್ಸವ ನಡೆಯಲಿದೆ.

karunaduexams.com

86. ಇತ್ತೀಚೆಗೆ ನಿಧನರಾದ “ಪಂಡಿತ್ ಬಿರ್ಜು ಮಹಾರಾಜ್” ಯಾವ ನೃತ್ಯ ಶೈಲಿಯಲ್ಲಿ ಪ್ರಸಿದ್ಧರಾಗಿದ್ದರು?

ಅ) ಕಥಕ್

ಆ) ಭರತನಾಟ್ಯ

ಇ) ಕುಚಿಪುಡಿ

ಈ) ಕಥಕ್ಕಳಿ

ಕಥಕ್

ಕಥಕ್ ನೃತ್ಯಶೈಲಿಯಲ್ಲಿ ದಿಗ್ಗಜರಾದ ಬಿರ್ಜು ಮಹಾರಾಜ್ ವಿಧಿವಶರಾಗಿದ್ದಾರೆ. ಬಿರ್ಜು ಅವರಿಗೆ 83 ವರ್ಷ ವಯಸ್ಸಾಗಿತ್ತು. ಬಿರ್ಜು ಮಹಾರಾಜ್ ಲಕ್ನೋದ ಕಲ್ಕಾ-ಬಿಂದಾದಿನ್ ಘರಾನಾದ ಪ್ರತಿಪಾದಕರಾಗಿದ್ದರು.

87. 9ನೇ ರಾಷ್ಟ್ರೀಯ ಮಹಿಳಾ ಐಸ್ ಹಾಕಿ ಚಾಂಪಿಯನ್ ಷಿಪ್ -2022 ಯಾವ ರಾಜ್ಯ/ಕೇಂದ್ರಾಡಳಿ ಪ್ರದೇಶದಲ್ಲಿ ನಡೆಯಲಿದೆ?

ಅ) ಉತ್ತರಖಂಡ

ಆ) ಹಿಮಾಚಲ ಪ್ರದೇಶ

ಇ) ಜಮ್ಮು

ಈ) ಲಡಾಕ್

ಹಿಮಾಚಲ ಪ್ರದೇಶ

9ನೇ ರಾಷ್ಟ್ರೀಯ ಮಹಿಳಾ ಐಸ್ ಹಾಕಿ ಚಾಂಪಿಯನ್ ಷಿಪ್ -2022 ಹಿಮಾಚಲ ಪ್ರದೇಶದಲ್ಲಿ ನಡೆಯಲಿದೆ.

88. ಯಾವ ರಾಜ್ಯ ದೇಶದ ಮೊದಲ “ಹೊಗೆ ರಹಿತ ರಾಜ್ಯ”ವೆಂದು ಘೋಷಿಸಲಾಗಿದೆ?

ಅ) ಕೇರಳ

ಆ) ಸಿಕ್ಕಿಂ

ಇ) ಹಿಮಾಚಲ ಪ್ರದೇಶ

ಈ) ಗೋವಾ

ಹಿಮಾಚಲ ಪ್ರದೇಶ

ಹಿಮಾಚಲ ಪ್ರದೇಶ ದೇಶದ ಮೊದಲ ಹೊಗೆ ರಹಿತ ರಾಜ್ಯವೆಂಬ ಕೀರ್ತಿಗೆ ಪಾತ್ರವಾಗಿದೆ. ಪ್ರಧಾನ ಮಂತ್ರಿ ಉಜ್ವಲ ಯೋಜನೆ ಹಾಗೂ ಹಿಮಾಚಲ ಗೃಹಿಣಿ ಸುವಿದ ಯೋಜನೆಯಡಿ ಈ ಮೈಲಿಗಲ್ಲನ್ನು ಸಾಧಿಸಲಾಗಿದೆ.

89. ಇತ್ತೀಚೆಗೆ ಸಾಗರಾಳದ ಜ್ವಾಲಾಮುಖಿಯಿಂದ ಸುದ್ದಿಯಲ್ಲಿದ್ದ “ಟೊಂಗಾ ದ್ವೀಪ” ಯಾವ ಪ್ರದೇಶದಲ್ಲಿದೆ?

ಅ) ಅರಬ್ಬಿ ಸಮುದ್ರ

ಆ) ದಕ್ಷಿಣ ಪೆಸಿಫಿಕ್ ಸಮುದ್ರ

ಇ) ಅಟ್ಲಾಂಟಿಕ್ ಸಾಗರ

ಈ) ಮೆಡಿಟೇರಿಯನ್ ಸಮುದ್ರ

ದಕ್ಷಿಣ ಪೆಸಿಫಿಕ್ ಸಮುದ್ರ

ದಕ್ಷಿಣ ಫೆಸಿಫಿಕ್ ಸಮುದ್ರದಲ್ಲಿರುವ ಟೊಂಗಾ ದ್ವೀಪದಲ್ಲಿ ಸಾಗರಾಳದ ಜ್ವಾಲಾಮುಖಿ ಉಂಟಾಗಿದ್ದು, ಸುನಾಮಿ ಮುನ್ನೆಚರಿಕೆ ನೀಡಲಾಗಿದೆ. ಈ ಜ್ವಾಲಾಮುಖಿ ಪೆಸಿಫಿಕ್ ರಿಂಗ್ ಆಫ್ ಫೈರ್ ನ ಭಾಗವಾಗಿದ್ದು, 2015ರಲ್ಲಿ ಕೊನೆಯದಾಗಿ ವರದಿಯಾಗಿತ್ತು.

90. "ಯೋಗ್ಯತ ಆಪ್ (Yogyata App)"ಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

1) ಕಾಮನ್ ಸರ್ವೀಸ್ ಸೆಂಟರ್ ಯೋಗ್ಯತ ಆಪ್ ಅನ್ನು ಅಭಿವೃದ್ಧಿಪಡಿಸಿದೆ
2) ಗ್ರಾಮೀಣ ಯುವ ಜನತೆಗೆ ಕೈಗಾರಿಕೆ ಆಧಾರಿತ ಕೌಶಲ್ಯವನ್ನು ಒದಗಿಸುವುದು ಆಪ್ ಉದ್ದೇಶ

ಸರಿಯಾದ ಉತ್ತರಗಳನ್ನು ಆಯ್ಕೆ ಮಾಡಿ?

ಅ) ಹೇಳಿಕೆ ಒಂದು ಮಾತ್ರ ಸರಿ

ಆ) ಹೇಳಿಕೆ ಎರಡು ಮಾತ್ರ ಸರಿ

ಇ) ಹೇಳಿಕೆ 1 & 2 ಸರಿ

ಈ) ಎರಡೂ ಹೇಳಿಕೆ ತಪ್ಪು

ಹೇಳಿಕೆ 1 & 2 ಸರಿ

ಗ್ರಾಮೀಣ ಯುವ ಜನತೆಗೆ ಕೈಗಾರಿಕೆ ಆಧಾರಿತ ಕೌಶಲ್ಯವನ್ನು ಒದಗಿಸುವುದು ಆಪ್ ಉದ್ದೇಶಕ್ಕಾಗಿ "ಯೋಗ್ಯತ ಮೊಬೈಲ್ ಅಪ್ಲಿಕೇಷನ್" ಅನ್ನು ಕಾಮನ್ ಸರ್ವೀಸ್ ಸೆಂಟರ್ ಇತ್ತೀಚೆಗೆ ಬಿಡುಗಡೆಗೊಳಿಸಿತು. ಸೈಬರ್ ಭದ್ರತೆ, ಕ್ಯಾಡ್, ತ್ರಿ ಡಿ ಪ್ರಿಟಿಂಗ್ ಸೇರಿದಂತೆ ವಿವಿಧ ಕೋರ್ಸ್ ಗಳ ಬಗ್ಗೆ ತರಭೇತಿಯನ್ನು ಈ ಆಪ್ ಮೂಲಕ ಪಡೆಯಬಹುದಾಗಿದೆ.

91. ಭರತ್ ಸುಬ್ರಮಣಿಯಮ್ ರವರು ಯಾವ ಕ್ರೀಡೆಯಲ್ಲಿ ಪ್ರಸಿದ್ದರಾಗಿದ್ದಾರೆ?

ಅ) ಚೆಸ್

ಆ) ಟೆನ್ನಿಸ್

ಇ) ಬ್ಯಾಡ್ಮಿಂಟನ್

ಈ) ಹಾಕಿ

ಚೆಸ್

ಹದಿನಾಲ್ಕು ವರ್ಷ ವಯಸ್ಸಿನ ಭರತ್ ಸುಬ್ರಮಣಿಯಮ್ ರವರು ಭಾರತದ 73ನೇ ಚೆಸ್ ಗ್ರಾಂಡ್ ಮಾಸ್ಟರ್ ಎನಿಸಿದರು. ಇಟಲಿಯ ವರ್ಗಾನಿ ಕಪ್ ಓಪನ್ ನಲ್ಲಿ ಮೂರನೇ ಮತ್ತು ಅಂತಿಮ ಜಿ.ಎಂ ನಾರ್ಮ್ ಪೂರ್ಣಗೊಳಿಸುವ ಮೂಲಕ ಈ ಸಾಧನೆಗೈದರು.

92. ಯಾವ ರಾಜ್ಯ ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿ ಹಾಗೂ ಉತ್ತಮ ಗುಣಮಟ್ಟ ನೀಡುವ ಸಲುವಾಗಿ "ಮನ ಊರು ಮನ ಬಡಿ (Mana Ooru Mana Badi)" ಯೋಜನೆ ಜಾರಿಗೆ ತರಲಿದೆ?

ಅ) ಗೋವಾ

ಆ) ತೆಲಂಗಣ

ಇ) ಆಂಧ್ರ ಪ್ರದೇಶ

ಈ) ತಮಿಳುನಾಡು

ತೆಲಂಗಣ

ಸರ್ಕಾರಿ ಶಾಲೆಗಳನ್ನು ಬಲಪಡಿಸಲು ತೆಲಂಗಾಣ 'ಮನ ಊರು ಮನ ಬಡಿ' ಪ್ರಾರಂಭಿಸಲಿದೆ. ತೆಲಂಗಾಣ ರಾಜ್ಯದಾದ್ಯಂತ ಶಾಲೆಗಳಲ್ಲಿ ಸರ್ವಾಂಗೀಣ ಅಭಿವೃದ್ಧಿ ಮತ್ತು ಪರಿಣಾಮಕಾರಿ ಮೂಲಭೂತ ಮೂಲಸೌಕರ್ಯಗಳ ರಚನೆಯ ಉದ್ದೇಶದ 'ಮನ ಊರು ಮನ ಬಡಿ' ಕಾರ್ಯಕ್ರಮಕ್ಕೆ ಸಂಪುಟದ ಸಭೆ ಅನುಮೋದನೆ ನೀಡಿದೆ. ಈ ಕಾರ್ಯಕ್ರಮವನ್ನು ಮೂರು ವರ್ಷಗಳಲ್ಲಿ ಜಾರಿಗೆ ತರಲಿದ್ದು, 26.065 ಶಾಲೆಗಳ 19.84 ಲಕ್ಷ ಮಕ್ಕಳಿಗೆ ಅನುಕೂಲವಾಗಲಿದೆ. ರೂ 7,289 ಕೋಟಿ ಬಜೆಟ್ ಅನ್ನು ಇದಕ್ಕಾಗಿ ಮೀಸಲಿಡಲಾಗುವುದು.

93. ಇತ್ತೀಚೆಗೆ ನಿಧನರಾದ ಸಮಾಜ ಸೇವಕಿ ಹಾಗೂ ಪದ್ಮಶ್ರೀ ಪುರಸ್ಕೃತ ಶಾಂತಿ ದೇವಿ ಯಾವ ರಾಜ್ಯದವರು?

ಅ) ಮಹಾರಾಷ್ಟ್ರ

ಆ) ಒಡಿಶಾ

ಇ) ಗುಜರಾತ್

ಈ) ಬಿಹಾರ

ಒಡಿಶಾ

ಸಮಾಜ ಸೇವಕಿ ಹಾಗೂ ಪದ್ಮಶ್ರೀ ಪುರಸ್ಕೃತೆ ಶಾಂತಿದೇವಿ (88) ಒಡಿಶಾದ ರಾಯಗಡ ಜಿಲ್ಲೆಯ ಗುಣಪುರದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ. ಶಾಂತಾದೇವಿ ಆಗಿನ ಅವಿಭಜಿತ ಕೊರಾಪುಟ್ ಜಿಲ್ಲೆಯ ಬುಡಕಟ್ಟು ಜನಾಂಗದ ಮಹಿಳೆಯರ ಉನ್ನತಿಗಾಗಿ ಹೋರಾಡಿ ಅತ್ಯಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. ಬುಡಕಟ್ಟು ಮಕ್ಕಳಿಗಾಗಿ ರಾಯಗಡ ಜಿಲ್ಲೆಯ (ಅವಿಭಜಿತ ಕೊರಾಪುಟ್ ಜಿಲ್ಲೆ) ಸಂಖಲ್ಪದರ್ ಗ್ರಾಮದಲ್ಲಿ ಆಶ್ರಮವನ್ನು ಸ್ಥಾಪಿಸಿ ಕುಷ್ಠ ರೋಗಿಗಳ ಸೇವೆಯನ್ನು ಮಾಡಿದ್ದರು. ಅಷ್ಟೇ ಅಲ್ಲದೇ ಅನಾಥರು, ನಿರ್ಗತಿಕರು ಮತ್ತು ಬಡ ಮಕ್ಕಳ ಪುನರ್ವಸತಿಗಾಗಿ ಅವರು 1964ರಲ್ಲಿ ರಾಯಗಡ ಜಿಲ್ಲೆಯ ಗುಣಪುರದಲ್ಲಿ ಸೇವಾ ಸಮಾಜ ಆಶ್ರಮವನ್ನು ಸ್ಥಾಪಿಸಿದರು.

94. ಮಾರುಕಟ್ಟೆ ನಿಯಂತ್ರಕ "ಸೆಬಿ (SEBI)" ಇತ್ಯರ್ಥ ಅರ್ಜಿಗಳನ್ನು ಸಲ್ಲಿಸುವ ಕಾಲಾವಧಿಯನ್ನು 180 ದಿನಗಳಿಂದ ಎಷ್ಟು ದಿನಗಳಿಗೆ ಕಡಿತಗೊಳಿಸಿದೆ?

ಅ) 30

ಆ) 60

ಇ) 70

ಈ) 50

60

ಮಾರುಕಟ್ಟೆ ನಿಯಂತ್ರಕ ಸೆಬಿ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸುವ ಪ್ರಯತ್ನದಲ್ಲಿ ಪ್ರಸ್ತುತ 180 ದಿನಗಳಿಂದ ಇತ್ಯರ್ಥ ಅರ್ಜಿಗಳನ್ನು ಸಲ್ಲಿಸುವ ಸಮಯವನ್ನು ಕೇವಲ 90 ದಿನಗಳಿಗೆ ಕಡಿತಗೊಳಿಸಿದೆ.

95. "Bose: The Untold Story of An Inconvenient Nationalist" ಪುಸ್ತಕದ ಲೇಖಕರು ____?

ಅ) ವಿಕ್ರಮ್ ಸೇತ್

ಆ) ತ್ರಿಲೋಕ್ ಸಿಂಗ್

ಇ) ಚಂದ್ರಚೂರ್ ಘೋಷ್

ಈ) ಅಭಿಷೇಕ್ ಬ್ಯಾನರ್ಜಿ

ಚಂದ್ರಚೂರ್ ಘೋಷ್

96. "ನ್ಯಾಷನಲ್ ಸ್ಟಾರ್ಟ್‌ಅಪ್ ಪ್ರಶಸ್ತಿ-2021"ರಲ್ಲಿ ಅತಿ ಹೆಚ್ಚು ಪ್ರಶಸ್ತಿ ಪಡೆದುಕೊಂಡ ರಾಜ್ಯ ಯಾವುದು?

ಅ) ಕರ್ನಾಟಕ

ಆ) ಗುಜರಾತ್

ಇ) ಹರಿಯಾಣ

ಈ) ಕೇರಳ

ಕರ್ನಾಟಕ

ಕರ್ನಾಟಕ ರಾಜ್ಯ 14 ಪ್ರಶಸ್ತಿಗಳನ್ನು ಪಡೆದುಕೊಳ್ಳುವ ಮೂಲಕ ರಾಷ್ಟ್ರೀಯ ಸ್ಟಾರ್ಟ್‌ಅಪ್ ಪ್ರಶಸ್ತಿ-2021"ರಲ್ಲಿ ಅಗ್ರಸ್ಥಾನ ಪಡೆದುಕೊಂಡಿತು. ಒಟ್ಟಾರೆ 46 ಸ್ಟಾರ್ಟ್ ಅಪ್ ಗಳಲ್ಲಿ ಕರ್ನಾಟಕದ 14 ಸ್ಟಾರ್ಟ್ ಅಪ್ ಗಳಿಗೆ ಪ್ರಶಸ್ತಿ ದೊರೆತಿದೆ.

karunaduexams.com

97. ಇತ್ತೀಚೆಗೆ ನಿಧನರಾದ “ನಾರಾಯಣ ದೇಬಾಂತ್” ಯಾವ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದರು?

ಅ) ವ್ಯಂಗ್ಯ ಚಿತ್ರ

ಆ) ಸಾಹಿತ್ಯ

ಇ) ರಂಗಭೂಮಿ

ಈ) ವಿಜ್ಞಾನ

ವ್ಯಂಗ್ಯ ಚಿತ್ರ

ವ್ಯಂಗ್ಯಚಿತ್ರಕಾರ ನಾರಾಯಣ ದೇಬಾಂತ್ ನಿಧನರಾದರು. ಬಂತೂಲ್ ದಿ ಗ್ರೇಟ್, ಹಂಡಾ ಬೋಂಡಾ, ನೋಂಟೆ ಪೋಂಟೆ ಎಂಬ ಹಾಸ್ಯ ವ್ಯಂಗ್ಯ ಚಿತ್ರಗಳ ಮೂಲಕ ಪ್ರಸಿದ್ಧರಾಗಿದ್ದರು. 2021ರಲ್ಲಿ ಸರ್ಕಾರ ಇವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿತ್ತು.

98. ಯಾವ ಟೆಲಿಕಾಂ ಸಂಸ್ಥೆ ದೇಶದಲ್ಲಿ ಪ್ರಥಮ ಬಾರಿಗೆ ತನ್ನ ಪ್ರಿಪೇಯ್ಡ್ ಬಳಕೆದಾರರಿಗೆ UPI ಆಟೋಪೇ (UPI Autopay) ಹೊಸ ವೈಶಿಷ್ಟ್ಯವನ್ನು ಪರಿಚಯಿಸಿದೆ?

ಅ) ಏರ್ ಟೆಲ್

ಆ) ಜಿಯೋ

ಇ) ವಿಐ

ಈ) ಬಿಎಸ್ಎನ್ಎಲ್

ಜಿಯೋ

ರಿಲಯನ್ಸ್ ಜಿಯೋ ತನ್ನ ಬಳಕೆದಾರರ ಜೀವನವನ್ನು ಸುಲಭಗೊಳಿಸಲು ತನ್ನ ಪ್ರಿಪೇಯ್ಡ್ ಬಳಕೆದಾರರಿಗೆ UPI ಆಟೋಪೇ (UPI Autopay) ಹೊಸ ವೈಶಿಷ್ಟ್ಯವನ್ನು ತಂದಿದೆ. ರಿಲಯನ್ಸ್ ಜಿಯೋ ಯುಪಿಐ ಆಟೋಪೇ ವೈಶಿಷ್ಟ್ಯವು ರಿಲಯನ್ಸ್ ಮತ್ತು ನ್ಯಾಷನಲ್ ಪೇಮೆಂಟ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ (ಎನ್ ಪಿಸಿಐ) ನಡುವಿನ ಪಾಲುದಾರಿಕೆಯಿಂದ ಬಂದಿದೆ. ಈ ಹೊಸ ವೈಶಿಷ್ಟ್ಯವು ಬಳಕೆದಾರರಿಗೆ ತಮ್ಮ ರಿಲಯನ್ಸ್ ಜಿಯೋ ಸಂಖ್ಯೆಗೆ ಪ್ರೀಪೇಯ್ಡ್ ಪ್ಲಾನ್‌ಗಳನ್ನು ಸ್ವಯಂಚಾಲಿತವಾಗಿ ರೀಚಾರ್ಜ್ ಮಾಡಲು ಅನುಮತಿಸುತ್ತದೆ.

99. ಫಿಫಾ (FIFA) ಅತ್ಯುತ್ತಮ ಆಟಗಾರ ಪ್ರಶಸ್ತಿ ಈ ಮುಂದಿನ ಯಾರಿಗೆ ಲಭಿಸಿದೆ?

ಅ) ಲಿಯೊನೆಲ್ ಮೆಸ್ಸಿ

ಆ) ಕ್ರಿಸ್ಟಿಯಾನೊ ರೊನಾಲ್ಡೊ

ಇ) ರಾಬರ್ಟ್ ಲೆವೊಡೌಂಸ್ಕಿ

ಈ) ರಿಯಾದ್ ಮೆಹ್ರೆಜ್

ರಾಬರ್ಟ್ ಲೆವೊಡೌಂಸ್ಕಿ

Karunaduexams.com

ಪೊಲ್ಯಾಂಡ್ ತಂಡದ ನಾಯಕ ರಾಬರ್ಟ್ ಲೆವೊಡೌಂಸ್ಕಿ ರವರು ಸತತ ಎರಡನೇ ಬಾರಿಗೆ ಫಿಫಾ (FIFA) ಅತ್ಯುತ್ತಮ ಆಟಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬಾರ್ಸಿಲೋನಾದ ಅಲೆಕ್ಸಿಯಾ ಪುಟೆಲಾಸ್ ರವರು ಅತ್ಯುತ್ತಮ ಆಟಗಾರ್ತಿ ಪ್ರಶಸ್ತಿ ಪಡೆದುಕೊಂಡಿದ್ದಾರೆ.

100. ಈ ಕೆಳಗಿನ ಯಾವ ಸಂಸ್ಥೆ ಇತ್ತೀಚೆಗೆ "ಸಾ₹ಥಿ (Saa₹thi)" ಮೊಬೈಲ್ ಅಪ್ಲಿಕೇಷನ್ ಬಿಡುಗಡೆಗೊಳಿತು?

ಅ) ಭಾರತೀಯ ರಿಸರ್ವ್ ಬ್ಯಾಂಕ್

ಆ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಇ) ಸೆಬಿ

ಈ) ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ

ಸೆಬಿ

ಸೆಕ್ಯುರಿಟೀಸ್ ಅಂಡ್ ಎಕ್ಸ್ ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) 2022ರ ಜನವರಿ 19ರಂದು ಹೂಡಿಕೆದಾರರ ಶಿಕ್ಷಣದ ಮೊಬೈಲ್ ಆ್ಯಪ್ ಸಾ₹ಥಿಯನ್ನು ಬಿಡುಗಡೆ ಮಾಡಿತು. ಈ ಅಪ್ಲಿಕೇಶನ್ ಸೆಕ್ಯುರಿಟೀಸ್ ಮಾರುಕಟ್ಟೆ, ಕೆವೈಸಿ (ನಿಮ್ಮ ಗ್ರಾಹಕರನ್ನು ತಿಳಿಯಿರಿ) ಪ್ರಕ್ರಿಯೆ, ಮ್ಯೂಚುಯಲ್ ಫಂಡ್ ಗಳು, ವ್ಯಾಪಾರ ಮತ್ತು ಇತ್ಯರ್ಥ, ಇತ್ತೀಚಿನ ಮಾರುಕಟ್ಟೆ ಬೆಳವಣಿಗೆಗಳು ಮತ್ತು ಹೂಡಿಕೆದಾರರ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ಮೂಲಭೂತ ಪರಿಕಲ್ಪನೆಗಳ ಬಗ್ಗೆ ಹೂಡಿಕೆದಾರರಲ್ಲಿ ಜಾಗೃತಿ ಮೂಡಿಸುತ್ತದೆ.

101. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

ಭಾರತದ ಹವಾಮಾನ ಅಪಾಯಗಳು ಮತ್ತು ದುರ್ಬಲತೆಯ ಅಟ್ಲಾಸ್ ಅನ್ನು CRS ಸಂಸ್ಥೆಯ ವಿಜ್ಞಾನಿಗಳು ರಚಿಸಿದ್ದಾರೆ.

CRS ಸಂಸ್ಥೆಯು ಭಾರತೀಯ ಹವಾಮಾನ ಇಲಾಖೆಯಡಿ ಕಾರ್ಯನಿರ್ವಹಿಸುವ ಸಂಸ್ಥೆಯಾಗಿದೆ

ಮಧ್ಯಮ, ಕಡಿಮೆ, ಹೆಚ್ಚು ಮತ್ತು ಅತಿ ಹೆಚ್ಚು ಸೇರಿದಂತೆ ಪ್ರತಿ ಜಿಲ್ಲೆಯ ದುರ್ಬಲ ಸೂಚ್ಯಂಕವನ್ನು ಇದು ಒದಗಿಸಲಿದೆ.

ಮೇಲ್ಕಂಡ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) 1 ಮಾತ್ರ

ಆ) 1 & 2

ಇ) 1, 2 & 3

ಈ) 2 & 3

Karunaduexams.com

1, 2 & 3

ಭಾರತದ ಹವಾಮಾನ ಅಪಾಯಗಳು ಮತ್ತು ದುರ್ಬಲತೆಯ ಅಟ್ಲಾಸ್ ಅನ್ನು CRS ಸಂಸ್ಥೆಯ ವಿಜ್ಞಾನಿಗಳು ರಚಿಸಿದ್ದು, ಭಾರತೀಯ ಹವಾಮಾನ ಇಲಾಖೆಯ ಸಂಸ್ಥಾಪನ ದಿನ ಅಂದರೆ ಜನವರಿ 14 ರಂದು ಬಿಡುಗಡೆಗೊಳಿಸಲಾಯಿತು. CRS ಸಂಸ್ಥೆಯು ಭಾರತೀಯ ಹವಾಮಾನ ಇಲಾಖೆಯಡಿ ಕಾರ್ಯನಿರ್ವಹಿಸುವ ಸಂಸ್ಥೆಯಾಗಿದೆ. ಮಧ್ಯಮ, ಕಡಿಮೆ, ಹೆಚ್ಚು ಮತ್ತು ಅತಿ ಹೆಚ್ಚು ಸೇರಿದಂತೆ ಪ್ರತಿ ಜಿಲ್ಲೆಯ ದುರ್ಬಲ ಸೂಚ್ಯಂಕವನ್ನು ಇದು ಒದಗಿಸಲಿದೆ.

102. ಈ ಕೆಳಗಿನ ಯಾರು ಭಾರತೀಯ ಸೇನಾ ಪಡೆಯ ಉಪ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ?

ಅ) ಮನೋಜ್ ಪಾಂಡೆ

ಆ) ಅಭಯ್ ಚಂದ್ರ

ಇ) ನರೇಶ್ ಸಿನ್ಹಾ

ಈ) ಕುಶ್ವಾವತ್ ಸಿಂಗ್

ಮನೋಜ್ ಪಾಂಡೆ

103. "ಇಫ್ಕೋ (ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ಸ್ ಕೋಆಪರೇಟಿವ್ (IFFCO))"ದ ನೂತನ ಅಧ್ಯಕ್ಷರು ಯಾರು?

ಅ) ರವೀಂದರ್ ದಾಸ್

ಆ) ದಿಲೀಪ್ ಸಂಘಾನಿ

ಇ) ಶತ್ರುಘ್ನ ಜೈನ್

ಈ) ರವಿಕಾಂತ್ ಕಾಂಬ್ಳೆ

ದಿಲೀಪ್ ಸಂಘಾನಿ

ದೀಲಿಪ್ ಸಂಘಾನಿ, ಗುಜರಾತ್‌ನ ಮಾಜಿ ಕೃಷಿ ಮತ್ತು ಸಂಸದೀಯ ವ್ಯವಹಾರಗಳ ಸಚಿವ ರವರು ವಿಶ್ವದ ನಂಬರ್ ಒನ್ ಮತ್ತು ದೊಡ್ಡ ಸಹಕಾರಿ ಸಂಸ್ಥೆಯಾದ ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ ಕೋಆಪರೇಟಿವ್ ಲಿಮಿಟೆಡ್‌ನ 17 ನೇ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

104. ಇತ್ತೀಚೆಗೆ ಇಂಡೋನೇಷ್ಯಾ ದೇಶ ತನ್ನ ರಾಜಧಾನಿಯನ್ನು ಜಕಾರ್ತ ದಿಂದ ಯಾವ ದ್ವೀಪ ಪ್ರದೇಶಕ್ಕೆ ವರ್ಗಾಹಿಸಲು ನಿರ್ಧರಿಸಿದೆ?

ಅ) ಸುಮಾತ್ರ

ಆ) ಜಾವ

ಇ) ಬೋರ್ನಿಯೊ

ಈ) ನ್ಯೂ ಗಿನಿಯಾ

ಬೋರ್ನಿಯೊ

Karunaduexams.com

ಇಂಡೋನೇಷ್ಯಾ ತನ್ನ ಹೊಸ ರಾಜಧಾನಿಯನ್ನು ಅಧಿಕೃತವಾಗಿ ಘೋಷಿಸಿದ್ದು ನುಸಂತಾರಾ ಎಂದು ಹೆಸರಡಿಲಾಗಿದೆ. ಪೂರ್ವ ಬೋರ್ನಿಯೊ ದ್ವೀಪದ ಕಲಿಮಂಟನ್ ಪ್ರದೇಶಕ್ಕೆ ರಾಜಧಾನಿಯನ್ನು ಸ್ಥಳಾಂತರಿಸುವ ಕಾರ್ಯ ಈ ವರ್ಷದಲ್ಲಿ ಪ್ರಾರಂಭವಾಗಲಿದೆ. ಜಕಾರ್ತದಲ್ಲಿ ಜನಸಂಖ್ಯೆ ಅಧಿಕವಾಗಿ ಹೆಚ್ಚಳವಾಗುತ್ತಿದೆ ಅಲ್ಲದೆ ಭವಿಷ್ಯದಲ್ಲಿ ಮುಳುಗಡೆ ಭೀತಿಯಿರುವುದರಿಂದ ರಾಜಧಾನಿಯನ್ನು ಬದಲಾಯಿಸುವ ನಿರ್ಣಯಕ್ಕೆ ಬರಲಾಗಿದೆ.

105. ರಾಷ್ಟ್ರೀಯ ಸಫಾಯಿ ಕರ್ಮಚಾರಿಗಳ ಆಯೋಗಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳನ್ನು ಗಮನಿಸಿ:

1) ಸಫಾಯಿ ಕರ್ಮಚಾರಿಗಳ ಆಯೋಗವು ತಾತ್ಕಾಲಿಕ ಶಾಸನಬದ್ಧವಲ್ಲದ ಸಂಸ್ಥೆಯಾಗಿದೆ

2) ಇದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತದೆ

3) ಇತರೆ ಆಯೋಗಗಳಂತೆ ಇದು ಕೂಡ ಸಿವಿಲ್ ನ್ಯಾಯಾಲದ ಅಧಿಕಾರವನ್ನು ಹೊಂದಿದೆ

ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿ?

ಅ) 1 & 2

ಆ) 2 & 3

ಇ) 3 ಮಾತ್ರ

ಈ) 1, 2 & 3

1 & 2

ಕೇಂದ್ರ ಸರ್ಕಾರ ಸಫಾಯಿ ಕರ್ಮಚಾರಿಗಳ ಆಯೋಗದ ಅಧಿಕಾರವನ್ನು ಮೂರು ವರ್ಷಗಳ ಅವಧಿಗೆ ವಿಸ್ತರಿಸಿದೆ. ಸಫಾಯಿ ಕರ್ಮಚಾರಿಗಳ ಆಯೋಗವು ತಾತ್ಕಾಲಿಕ ಶಾಸನಬದ್ಧವಲ್ಲದ ಸಂಸ್ಥೆಯಾಗಿದೆ. ಇದು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತದೆ. ಇದು ಶಾಸನಬದ್ಧ ಸಂಸ್ಥೆ ಅಲ್ಲದ ಕಾರಣ ರಾಷ್ಟ್ರೀಯ ಮಹಿಳಾ ಆಯೋಗ, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗಗಳಂತೆ ಸಿವಿಲ್ ನ್ಯಾಯಾಲದ ಅಧಿಕಾರವನ್ನು ಹೊಂದಿಲ್ಲ.

106. ಯಾವ ರಾಷ್ಟ್ರ “ಬ್ರಿಕ್ಸ್ ಶೆರ್ಪಾಸ್-2022 (BRICS Sherpas)” ಸಭೆಯ ಅಧ್ಯಕ್ಷತೆಯನ್ನು ವಹಿಸತ್ತು?

ಅ) ಚೀನಾ

ಆ) ಭಾರತ

ಇ) ರಷ್ಯಾ

ಈ) ಬ್ರೆಜಿಲ್

ಚೀನಾ

2022 ರ ಮೊದಲ ಬ್ರಿಕ್ಸ್ ಶೆರ್ಪಾಸ್ ಸಭೆಯು ಜನವರಿ 18-19 2022 ರಂದು ಚೀನಾದ ಅಧ್ಯಕ್ಷತೆಯಲ್ಲಿ ವಾಸ್ತವಿಕವಾಗಿ ನಡೆಯಿತು. 2021 ರಲ್ಲಿ ಭಾರತ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡಿದ್ದು, ಚೀನಾಗೆ ವಹಿಸಿಕೊಡಲಾಯಿತು.

karunaduexams.com

107. ಕೊವಿಡ್-19 ಲಸಿಕೆ ಸಂಶೋಧನೆಗಾಗಿ “ಜೆನೆಸಿಸ್ ನೊಬೆಲ್ ಪ್ರಶಸ್ತಿ” ಯಾರಿಗೆ ಲಭಿಸಿದೆ?

ಅ) ಆಲ್ಬರ್ಟ್ ಬೌರ್ಲಾ

ಆ) ಅದರ್ ಪೂನವಲ್ಲ

ಇ) ಸ್ಟಾನ್ ಪೊಲೊವೆಟ್

ಈ) ನಟಲಿ ಪೋರ್ಟಮನ್

ಆಲ್ಬರ್ಟ್ ಬೌರ್ಲಾ

ಫಿಜರ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆಲ್ಬರ್ಟ್ ಬೌರ್ಲಾ ಅವರನ್ನು 2022 ರ ಜೆನೆಸಿಸ್ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಫಿಜರ್‌ನಲ್ಲಿ COVID-19 ವಿರುದ್ಧ ರಕ್ಷಿಸಲು ಮೊದಲ ಲಸಿಕೆಗಳಲ್ಲಿ ಒಂದನ್ನು ಅಭಿವೃದ್ಧಿಪಡಿಸಿದ ಬೌರ್ಲಾ ಅವರ ಶ್ರಮವನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಈ ಪ್ರಶಸ್ತಿಯನ್ನು ಕೆಲವೊಮ್ಮೆ "ಯಹೂದಿ ನೊಬೆಲ್" ಎಂತಲೂ ಕರೆಯಲಾಗುತ್ತದೆ.

108. ಹಸಿರು ಇಂಧನಗಳ ಮೇಲೆ ಜಂಟಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಪ್ರಾರಂಭಿಸಲು ಭಾರತ ಮತ್ತು ಯಾವ ದೇಶ ಜಂಟಿ ಸಂಶೋದನೆ ಕೈಗೊಳ್ಳಲು ಸಹಿ ಹಾಕಿವೆ?

ಅ) ಬ್ರೆಜಿಲ್

ಆ) ಡೆನ್ಮಾರ್ಕ್

ಇ) ಫ್ರಾನ್ಸ್

ಈ) ಇಸ್ರೇಲ್

ಡೆನ್ಮಾರ್ಕ್

ಹಸಿರು ಹೈಡ್ರೋಜನ್ ಸೇರಿದಂತೆ ಹಸಿರು ಇಂಧನಗಳ ಮೇಲೆ ಜಂಟಿ ಸಂಶೋಧನೆ ಮತ್ತು ಅಭಿವೃದ್ಧಿಯನ್ನು ಪ್ರಾರಂಭಿಸಲು ಭಾರತ ಮತ್ತು ಡೆನ್ಮಾರ್ಕ್ ಒಪ್ಪಿಕೊಂಡಿವೆ.

109. ಮಾರ್ನಿಂಗ್ ಕನ್ಸಲ್ಟ್ ಪಾಲಿಟಿಕಲ್ ಇಂಟೆಲಿಜೆನ್ಸ್ ಸಮೀಕ್ಷೆ ಪ್ರಕಾರ ಜಾಗತಿಕ ಮಟ್ಟದಲ್ಲಿ ಅತಿ ಹೆಚ್ಚು ಜನಪ್ರಿಯ ಹೊಂದಿರುವ ವ್ಯಕ್ತಿ ಯಾರು?

ಅ) ನರೇಂದ್ರ ಮೋದಿ

ಆ) ಜೋ ಬಿಡೆನ್

ಇ) ಬೊರಿಸ್ ಜಾನ್ಸನ್

ಈ) ಅಂಡ್ರಿಸ್ ಮ್ಯಾನುಯೆಲ್ ಲೊಪೆಜ್

ನರೇಂದ್ರ ಮೋದಿ

ವಿಶ್ವದ ಜನಪ್ರಿಯ ನಾಯಕರ ಪಟ್ಟಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಗ್ರಸ್ಥಾನ ಪಡೆದಿದ್ದಾರೆ. ಮಾರ್ನಿಂಗ್ ಕನ್ಸಲ್ಟ್ ಪಾಲಿಟಿಕಲ್ ಇಂಟೆಲಿಜೆನ್ಸ್ ಬಿಡುಗಡೆ ಮಾಡಿದ ಜಾಗತಿಕ ಅನುಮೋದನೆ ರೇಟಿಂಗ್ ಪ್ರಕಾರ, ಪ್ರಧಾನಿ ನರೇಂದ್ರ ಮೋದಿ ಅವರು ಶೇಕಡಾ 71 ರ ಅನುಮೋದನೆಯನ್ನು ಹೊಂದಿದ್ದಾರೆ. ಆಂಡ್ರೆಸ್ ಮ್ಯಾನುಯೆಲ್

karunaduexams.com

ಲೋಪೆಜ್ ಒಬ್ರಡಾರ್ (ಮೆಕ್ಸಿಕೊ) 66 ಶೇಕಡಾ ಅನುಮೋದನೆ ರೇಟಿಂಗ್‌ನೊಂದಿಗೆ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ.

110. ಈ ಕೆಳಗಿನ ಯಾರು "ಯುರೋಪಿಯನ್ ಪಾರ್ಲಿಮೆಂಟ್ (European Parliment)"ದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ?

ಅ) ರಾಬರ್ಟ ಮೆಟ್ಸೊಲ

ಆ) ಡೇವಿಡ್ ಸಸೊಲಿ

ಇ) ಆಲಿಸ್ ಬಹ್ ಕುಹ್ನೆಕ

ಈ) ಕೊಸ್ಮಾ ಜ್ಲೋಟೋವ್ಸ್ಕಿ

ಯುರೋಪಿಯನ್ ಪಾರ್ಲಿಮೆಂಟಿನ ಮುಖ್ಯಸ್ಥರಾಗಿ ಮಾಲ್ಟೀಸ್‌ನ ರಾಬರ್ಟಾ ಮೆಟ್ಸೊಲಾ ಅವರನ್ನು ಆಯ್ಕೆ ಮಾಡಲಾಯಿತು. ಮೆಟ್ಸೊಲಾ ಈ ಸ್ಥಾನವನ್ನು ಅಲಂಕರಿಸಿದ ಮೂರನೇ ಮಹಿಳೆಯಾಗಿದ್ದಾರೆ.

111. ತ್ತೀಚೆಗೆ ಯಾವ ದೇಶ ಗ್ಲೋಬಲ್ ಟೈಗರ್ ಫೋರಂ ಜೊತೆಗೂಡಿ 4ನೇ ಹುಲಿ ಸಂರಕ್ಷಣೆ ಕುರಿತಾದ ಏಷ್ಯಾ ಸಚಿವರ ಸಮ್ಮೇಳನವನ್ನು ಆಯೋಜಿಸಿತ್ತು?

ಅ) ಭಾರತ

ಆ) ಶ್ರೀಲಂಕಾ

ಇ) ಮಲೇಷಿಯಾ

ಈ) ಬಾಂಗ್ಲದೇಶ

ಮಲೇಷಿಯಾ

ಮಲೇಷಿಯಾ ಸರ್ಕಾರ ಮತ್ತು ಗ್ಲೋಬಲ್ ಟೈಗರ್ ಫೋರಂ 4ನೇ ಹುಲಿ ಸಂರಕ್ಷಣೆ ಕುರಿತಾದ ಏಷ್ಯಾ ಸಚಿವರ ಸಮ್ಮೇಳನವನ್ನು ಆಯೋಜಿಸಿತ್ತು. ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವರಾದ ಭೂಪೇಂದ್ರ ಯಾದವ್ ರವರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

112. "ಅದಿ ಬದ್ರಿ ಅಣೆಕಟ್ಟು ಯೋಜನೆ(Adi Badri) "ಗೆ ಸಂಬಂಧಿಸಿದಂತೆ ಯಾವ ಎರಡು ರಾಜ್ಯಗಳು ಒಡಂಬಡಿಕೆಗೆ ಸಹಿ ಮಾಡಿವೆ?

ಅ) ಪಂಜಾಬ್ ಮತ್ತು ಹರಿಯಾಣ

ಆ) ಹರಿಯಾಣ ಮತ್ತು ಹಿಮಾಚಲ ಪ್ರದೇಶ

ಇ) ಗುಜರಾತ್ ಮತ್ತು ರಾಜಸ್ತಾನ

ಈ) ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ

ಹರಿಯಾಣ ಮತ್ತು ಹಿಮಾಚಲ ಪ್ರದೇಶ

ಸರಸ್ವತಿ ನದಿಯನ್ನು ಪುನಶ್ಚೇತನಗೊಳಿಸುವ ಉದ್ದೇಶದೊಂದಿಗೆ ನಿರ್ಮಿಸಲಾಗುತ್ತಿರುವ ಅದಿ ಬದ್ರಿ ಅಣೆಕಟ್ಟು ಯೋಜನೆಗೆ ಹರಿಯಾಣ ಮತ್ತು ಹಿಮಾಚಲ ಪ್ರದೇಶ ಸರ್ಕಾರ ಒಡಂಬಡಿಕೆಗೆ ಸಹಿ ಹಾಕಿವೆ. ಹರಿಯಾಣದ ಯಮುನಾನಗರ ಜಿಲ್ಲೆಯಲ್ಲಿ ಅಣೆಕಟ್ಟನ್ನು ನಿರ್ಮಿಸಲಾಗುವುದು. ಯಮುನಾನಗರ ಜಿಲ್ಲೆ ಹರಿಯಾಣ ಪ್ರದೇಶದೊಂದಿಗೆ ಗಡಿಯನ್ನು ಹಂಚಿಕೆಗೊಂಡಿದೆ.

karunaduexams.com

113. ಯಾವ ದೇಶ ಕರಾವಳಿ ತೀರಾದಲ್ಲಿ ತೈಲ ಸೋರಿಕೆಯಿಂದಾಗಿ "ಪರಿಸರ ತುರ್ತು ಪರಿಸ್ಥಿತಿ"ಯನ್ನು ಘೋಷಿಸಿದೆ?
ಅ) ಪೆರು
ಆ) ಫಿಲಿಫೈನ್ಸ್
ಇ) ಇಂಡೋನೇಷಿಯಾ
ಈ) ಶ್ರೀಲಂಕಾ
ಪೆರು
ಪೆರು ರಾಷ್ಟ್ರ ಕರಾವಳಿ ತೀರಾದಲ್ಲಿ ತೈಲ ಸೋರಿಕೆಯಿಂದಾಗಿ 90 ದಿನಗಳ "ಪರಿಸರ ತುರ್ತು ಪರಿಸ್ಥಿತಿ"ಯನ್ನು ಘೋಷಿಸಿದೆ. ಸರಿಸುಮಾರ 6000 ಬ್ಯಾರಲ್ ತೈಲ ಸೋರಿಕೆ ಆಗಿರುವುದಾಗಿ ಹೇಳಲಾಗಿದೆ.

114. ಸೈಯದ್ ಮೋದಿ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿಯನ್ನು ಜಯಿಸಿದವರು ಯಾರು?
ಅ) ಸೈನಾ ನೆಹ್ವಾಲ್
ಆ) ಪಿ ವಿ ಸಿಂಧೂ
ಇ) ಮಾಳವಿಕಾ ಬನ್ಸೊಡ್
ಈ) ಜ್ವಾಲ ಗುಟ್ಟ
ಪಿ ವಿ ಸಿಂಧೂ
ಭಾರತದ ಸ್ಟಾರ್ ಸೆಟ್ಲರ್ ಪಿ ವಿ ಸಿಂಧೂ ರವರು ಮಾಳವಿಕ ಬನ್ಸೋಡ್ ರವರನ್ನು ಮಣಿಸುವ ಮೂಲಕ ಸೈಯದ್ ಮೋದಿ ಅಂತಾರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು.

115. ರಾಷ್ಟ್ರೀಯ ಹೆಣ್ಣು ಮಗು ದಿನವನ್ನು ಯಾವ ವರ್ಷದಿಂದ ಆಚರಿಸಲಾಗುತ್ತಿದೆ?
ಅ) 2010
ಆ) 2008
ಇ) 2011
ಈ) 2012
2008
ರಾಷ್ಟ್ರೀಯ ಹೆಣ್ಣು ಮಗು ದಿನವನ್ನು 2008 ರಿಂದ ಪ್ರತಿ ವರ್ಷ ಜನವರಿ 24 ರಂದು ಆಚರಿಸಲಾಗುತ್ತಿದೆ. ಲಿಂಗ ಸಮಾನತೆ, ಹೆಣ್ಣು ಮಕ್ಕಳ ಶಿಕ್ಷಣ ಹಾಗೂ ಹೆಣ್ಣು ಮಗುವಿನ ಸಬಲೀಕರಣ ಕುರಿತು ಅರಿವು ಮೂಡಿಸಲು ಈ ದಿನವನ್ನು ಆಚರಿಸಲಾಗುತ್ತದೆ.

116. ಇತ್ತೀಚೆಗೆ ನಿಧನರಾದ "ಸುಭಾಷ್ ಭೌಮಿಕ್" ಯಾವ ಕ್ರೀಡೆಯಲ್ಲಿ ಪ್ರಸಿದ್ದರಾಗಿದ್ದರು?
ಅ) ಕ್ರಿಕೆಟ್
ಆ) ಫುಟ್ಬಾಲ್
ಇ) ಹಾಕಿ
ಈ) ಕಬ್ಬಡಿ
ಫುಟ್ಬಾಲ್
ಫುಟ್ಬಾಲ್ ದಿಗ್ಗಜ ಸುಭಾಷ್ ಭೌಮಿಕ್ ರವರು ನಿಧನರಾದರು. ಒಟ್ಟಾರೆ 24 ಅಂತರಾಷ್ಟ್ರೀಯ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. 1970ರಲ್ಲಿ ಏಷ್ಯನ್ ಗೇಮ್ಸ್ ನಲ್ಲಿ ಕಂಚಿನ ಪದಕವನ್ನು ಭೌಮಿಕ್ ಗೆದ್ದಿದ್ದರು.

karunaduexams.com

117. ಯಾರ ಜನ್ಮದಿನವನ್ನು "ಪರಾಕ್ರಮ ದಿವಸ" ವೆಂದು ಆಚರಿಸಲಾಗುತ್ತದೆ?
ಅ) ಸರ್ದಾರ್ ವಲ್ಲಾಬಾಯ್ ಪಟೇಲ್
ಆ) ಡಾ. ಬಿ. ಆರ್. ಅಂಬೇಡ್ಕರ್
ಇ) ಸುಭಾಷ್ ಚಂದ್ರ ಬೋಸ್
ಈ) ಜವಹಾರ್ ಲಾಲ್ ನೆಹರೂ
ಸುಭಾಷ್ ಚಂದ್ರ ಬೋಸ್

118. "ಯುನೈಟೆಡ್ ನೇಷನ್ಸ್ ಡೆವೆಲಪ್ಮೆಂಟ್ ಪ್ರೋಗ್ರಾಂ (UNDP)"ನ ಯೂಥ್ ಕ್ಲೈಮೆಟ್ ಚಾಂಪಿಯನ್ ಷಿಪ್ ಗೆ ಆಯ್ಕೆಯಾದ ಭಾರತದ ಮೊದಲಿಗರು ಯಾರು?
ಅ) ಪ್ರಜಕ್ತ ಕೋಲಿ
ಆ) ಯಶ್ ಚಾವ್ಲ
ಇ) ಕಿಶೋರಿ ಸಿಂಗ್
ಈ) ರಮಣ್ ರಾವ್
ಪ್ರಜಕ್ತ ಕೊಹ್ಲಿ
ನಟಿ ಹಾಗೂ ಯೂಟ್ಯೂಬ್ ಚಾನಲ್ ಕಂಟೆಂಟ್ ಬರಹಗಾರ್ತಿ ಪ್ರಜಕ್ತ ಕೋಲಿ ರವರನ್ನು ಯುನೈಟೆಡ್ ನೇಷನ್ಸ್ ಡೆವೆಲಪ್ಮೆಂಟ್ ಪ್ರೋಗ್ರಾಂ (UNDP)"ನ ಯೂಥ್ ಕ್ಲೈಮೆಟ್ ಚಾಂಪಿಯನ್ ಷಿಪ್ ಗೆ ಆಯ್ಕೆಮಾಡಲಾಗಿದೆ. ಕೋಲಿ ರವರು ಯೂಥ್ ಕ್ಲೈಮೆಟ್ ಚಾಂಪಿಯನ್ ಷಿಪ್ ಗೆ ನೇಮಕಗೊಂಡ ಭಾರತದ ಮೊದಲಿಗರು ಎನಿಸಿದ್ದಾರೆ.

119. ಇತ್ತೀಚೆಗೆ ಜಾರಿಗೆ ತರಲಾದ "Koyla Darpan (ಕೊಯ್ಲಾ ದರ್ಪಣ್)" ಪೋರ್ಟಲ್ ಯಾವ ಕ್ಷೇತ್ರಕ್ಕೆ ಸಂಬಂಧಿಸಿದೆ?
ಅ) ಮಹಿಳೆ ಮತ್ತು ಮಕ್ಕಳು
ಆ) ಕಲ್ಲಿದ್ದಲು
ಇ) ಮಣ್ಣು ಸಂರಕ್ಷಣೆ
ಈ) ವಿದ್ಯುತ್
ಕಲ್ಲಿದ್ದಲು
ಕಲ್ಲಿದ್ದಲು ವಲಯಕ್ಕೆ ಸಂಬಂಧಿಸಿದ ಪ್ರಮುಖ ಕಾರ್ಯಕ್ಷಮತೆ ಸೂಚಕಗಳನ್ನು ಹಂಚಿಕೆಕೊಳ್ಳು "ಕೊಯ್ಲಾ ದರ್ಪಣ್" ಪೋರ್ಟಲ್ ಅನ್ನು ಕಲ್ಲಿದ್ದಲು ಸಚಿವಾಲಯ ಅಭಿವೃದ್ದಿಪಡಿಸಿದೆ. ಕಲ್ಲಿದ್ದಲು ಲಭ್ಯತೆ, ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲ ಸಂಗ್ರಹಣೆ ಸೇರಿದಂತೆ ಇತರೆ ಮಾಹಿತಿಯನ್ನು ಈ ಪೋರ್ಟಲ್ ಒದಗಿಸಲಿದೆ.

120. ನಾಸಾದ ಪ್ರತಿಷ್ಠಿತ "ಇಂಟರ್ ನ್ಯಾಷನಲ್ ಏರ್ ಅಂಡ್ ಸ್ಪೇಸ್ ಪ್ರೋಗ್ರಾಂ (International Air and Space Programme)" ಪೂರ್ಣಗೊಳಿಸದ ಭಾರತದ ಮೊದಲ ವ್ಯಕ್ತಿ ___?
ಅ) ದಿವ್ಯಾ ಸುರೇಂದ್ರನಾಥ್
ಆ) ರಿಚಾ ಕೌರ್
ಇ) ಜಾಹ್ನವಿ ಡಾಂಗೇತಿ
ಈ) ಅಜಯ್ ಶಾರ್ದೂಲ್
ಜಾಹ್ನವಿ ಡಾಂಗೇತಿ
ಆಂಧ್ರ ಪ್ರದೇಶ ಮೂಲದ ಜಾಹ್ನವಿ ಡಾಂಗೇತಿ ರವರು ನಾಸಾದ ಪ್ರತಿಷ್ಠಿತ "ಇಂಟರ್ ನ್ಯಾಷನಲ್ ಏರ್ ಅಂಡ್ ಸ್ಪೇಸ್ ಪ್ರೋಗ್ರಾಂ" ಅನ್ನು ಕೆನಡಿ ಸ್ಪೇಸ್ ಸೆಂಟರ್ನಲ್ಲಿ ಪೂರ್ಣಗೊಳಿಸಿದ್ದಾರೆ. ಜಾಹ್ನವಿ ರವರು ಈ ಸಾಧನೆಯನ್ನು ಗೈದ ಭಾರತದ ಮೊದಲಿಗರು. ವಿಶ್ವದಾದ್ಯಂತ ಕೇವಲ 20 ಜನರಿಗೆ ಮಾತ್ರ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ಇದೆ.

karunaduexams.com

121. “Legend of Birsa Munda” ಪುಸ್ತಕದ ಲೇಖಕರು ______?
ಅ) ಸುಬ್ರಮಣ್ಯ ಸ್ವಾಮಿ
ಆ) ತುಹಿನ್ ಎ ಸಿನ್ಹಾ
ಇ) ರಸಿಕ್ ರವೀಂದ್ರ
ಈ) ರಮಣ್ ಚೌಧರಿ
ತುಹಿನ್ ಎ ಸಿನ್ಹಾ
ಬಿಜೆಪಿ ನಾಯಕ ಮತ್ತು ಲೇಖಕ ತುಹಿನ್ ಎ ಸಿನ್ಹಾ ರವರ ಪುಸ್ತಕ “ಲೆಜೆಂಡ್ ಆಫ್ ಬಿರ್ಸಾ ಮುಂಡಾ” ಅನ್ನು ಮಹಾರಾಷ್ಟ್ರ ರಾಜ್ಯಪಾಲರಾದ ಭಗತ್ ಸಿಂಗ್ ಕೋಶ್ಯಾರಿ ಬಿಡುಗಡೆ ಮಾಡಿದರು.

122. ಐಸಿಸಿ ಏಕದಿನ ಕ್ರಿಕೆಟ್ ನ ವರ್ಷದ ಕ್ರಿಕೆಟಿಗ 2021 ಪ್ರಶಸ್ತಿಗೆ ಯಾರನ್ನು ಆಯ್ಕೆ ಮಾಡಲಾಗಿದೆ?
ಅ) ಬಾಬರ್ ಅಜಮ್
ಆ) ಜೋ ರೂಟ್
ಇ) ಡಿ ಕಾಕ್
ಈ) ಸ್ಟೀವ್ ಸ್ಮಿತ್
ಬಾಬರ್ ಅಜಮ್
ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕ ಬಾಬರ್ ಅಜಮ್ ರವರನ್ನು ಐಸಿಸಿ ಏಕದಿನ ಕ್ರಿಕೆಟ್ ನ ವರ್ಷದ ಕ್ರಿಕೆಟಿಗ 2021 ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಬಾಬರ್ ಅಜಮ್ ರವರು 2021 ರಲ್ಲಿ ಆರು ಪಂದ್ಯಗಳಲ್ಲಿ ಎರಡು ಶತಕಗಳಿಂದ 405 ರನ್ ಗಳಿಸಿ 67.50 ಸರಾಸರಿ ಕಾಪಾಡಿಕೊಂಡಿದ್ದರು. ಇಂಗ್ಲೆಂಡ್ ನ ಜೋ ರೂಟ್ ರವರಿಗೆ ಟೆಸ್ಟ್ ಕ್ರಿಕೆಟಿಗೆ ಪ್ರಶಸ್ತಿ ಲಭಿಸಿದೆ.

123. ರಾಷ್ಟ್ರೀಯ ಮತದಾನ ದಿನ-2022 ರ ಧ್ಯೇಯವಾಕ್ಯ ________?
ಅ) Your Vote Your Choice
ಆ) Making Election Inclusive, Accessible and Participative
ಇ) Election for All, All for Election
ಈ) Value Your Vote
Making Election Inclusive, Accessible and Participative

124. ಈ ಕೆಳಗಿನ ಯಾವ ಸಿನಿಮಾಗಳು “ಆಸ್ಕರ್-2022” ಪ್ರಶಸ್ತಿಗೆ ಭಾರತದಿಂದ ನಾಮ ನಿರ್ದೇಶನಗೊಂಡಿವೆ?
ಅ) ಜೈ ಭೀಮ್ ಮತ್ತು ಮರಕ್ಕರ್
ಆ) ಸಲಾಂ ಬಾಂಬೆ ಮತ್ತು ಜೈ ಭೀಮ್
ಇ) ಮಣಿರತ್ನಂ ಮತ್ತು ಸಲಾಂ ಬಾಂಬೆ
ಈ) ತಡಪ್ ಮತ್ತು ಜೈ ಭೀಮ್
ಜೈ ಭೀಮ್ ಮತ್ತು ಮರಕ್ಕರ್
ತಮಿಳು ಚಿತ್ರ ಜೈ ಭೀಮ್ ಮತ್ತು ಮಲಯಾಳಂ ಸಿನಿಮಾ ಮರಕ್ಕರ್: ಲಯನ್ ಆಫ್ ದಿ ಅರಬಿಯನ್ ಸೀ ಚಿತ್ರಗಳು ಆಸ್ಕರ್ ಪ್ರಶಸ್ತಿಗೆ ಭಾರತದಿಂದ ನಾಮನಿರ್ದೇಶನಗೊಂಡಿವೆ.

Karunaduexams.com

125. ಭಾರತದ ಮೊದಲ “ಪ್ಯಾರ ಬ್ಯಾಡ್ಮಿಂಟನ್” ಅಕಾಡೆಮಿ ಯಾವ ನಗರದಲ್ಲಿ ಸ್ಥಾಪನೆಗೊಂಡಿದೆ?
ಅ) ಮುಂಬೈ
ಆ) ಹೈದ್ರಾಬಾದ್
ಇ) ಲಕ್ನೋ
ಈ) ದೆಹಲಿ
ಲಕ್ನೋ
ಭಾರತದ ಮೊದಲ ಪ್ಯಾರ ಬ್ಯಾಡ್ಮಿಂಟನ್ ಅಕಾಡೆಮಿಯನ್ನು ಉತ್ತರಪ್ರದೇಶದ ಲಕ್ನೋದಲ್ಲಿ ಸ್ಥಾಪಿಸಲಾಗಿದೆ. ಭಾರತದ ಪ್ಯಾರ ಬ್ಯಾಡ್ಮಿಂಟನ್ ನ ಮುಖ್ಯ ತರಭೇತುದಾರರಾದ ಗೌರವ್ ಖನ್ನಾ ರವರು ಈ ಅಕಾಡೆಮಿಯನ್ನು ಸ್ಥಾಪಿಸಿದ್ದಾರೆ.

126. ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನು ಎಷ್ಟು ಕ್ಷೇತ್ರಗಳಿಗೆ ಕೊಡಲಾಗುತ್ತದೆ?
ಅ) 4
ಆ) 6
ಇ) 7
ಈ) 3
6
ಪ್ರತಿ ವರ್ಷ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನು 6 ಕ್ಷೇತ್ರಗಳಲ್ಲಿ ಸಾಧನೆಗೈದ ಬಾಲಕ/ಬಾಲಕಿಯರಿಗೆ ನೀಡಲಾಗುತ್ತದೆ. ಅವುಗಳೆಂದರೆ ಆವಿಷ್ಕಾರ, ಸಾಮಾಜಿಕ ಸೇವೆ, ಕ್ರೀಡೆ, ಕಲೆ ಮತ್ತು ಸಂಸ್ಕೃತಿ, ಶೌರ್ಯ ಮತ್ತು ಪಾಂಡಿತ್ಯ.

127. 20ನೇ ಢಾಕ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಏಷ್ಯಾ ಚಲನಚಿತ್ರ ಸ್ಪರ್ಧೆಯ ವಿಭಾಗದಲ್ಲಿ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಯಾವ ಸಿನಿಮಾಗೆ ಲಭಿಸಿದೆ?
ಅ) ಜೈ ಭೀಮ್
ಆ) ಮರಕ್ಕರ್
ಇ) ಡೊಳ್ಳು
ಈ) ಕೂಜಂಗಲ್
ಕೂಜಂಗಲ್
20ನೇ ಢಾಕ ಅಂತರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಏಷ್ಯಾ ಚಲನಚಿತ್ರ ಸ್ಪರ್ಧೆಯ ವಿಭಾಗದಲ್ಲಿ ಭಾರತದ ಕೂಜಂಗಲ್ ಸಿನಿಮಾ ಏಷ್ಯಾ ಚಲನಚಿತ್ರ ಸ್ಪರ್ಧೆಯ ವಿಭಾಗದಲ್ಲಿ ಅತ್ಯುತ್ತಮ ಸಿನಿಮಾ ಪ್ರಶಸ್ತಿಯನ್ನು ಗೆದ್ದುಕೊಂಡಿತು.

128. ಭಾರತ ಮತ್ತು ಯಾವ ದೇಶ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳ 30ನೇ ವಾರ್ಷಿಕೋತ್ಸವವನ್ನು ಗುರುತಿಸಲು ಸ್ಮರಣಾರ್ಥ ಲೋಗೋವನ್ನು ಬಿಡುಗಡೆ ಮಾಡಿವೆ?
ಅ) ಇಸ್ರೇಲ್
ಆ) ಬಾಂಗ್ಲಾದೇಶ
ಇ) ನೆದರ್ಲ್ಯಾಂಡ್
ಈ) ದಕ್ಷಿಣ ಕೊರಿಯ
ಇಸ್ರೇಲ್
ಭಾರತ ಮತ್ತು ಇಸ್ರೇಲ್ ದೇಶ ಉಭಯ ದೇಶಗಳ ನಡುವಿನ ರಾಜತಾಂತ್ರಿಕ ಸಂಬಂಧಗಳ 30ನೇ ವಾರ್ಷಿಕೋತ್ಸವವನ್ನು ಗುರುತಿಸಲು ಸ್ಮರಣಾರ್ಥ ಲೋಗೋವನ್ನು ಬಿಡುಗಡೆ ಮಾಡಿವೆ. ಎರಡು ರಾಷ್ಟ್ರಗಳ ರಾಷ್ಟ್ರಧ್ವಜದ ಮೇಲಿರುವ ಚಿಹ್ನೆಗಳಾದ ಅಶೋಕ ಚಕ್ರ ಹಾಗೂ ಸ್ಟಾರ್ ಆಫ್ ಡೇವಿಡ್ ಅನ್ನು ಲೋಗೊ ಒಳಗೊಂಡಿದೆ.

karunaduexams.com

129. "ಮಿಯಾ ಮೊಟ್ಲಿ" ರವರು ಯಾವ ದೇಶದ ಪ್ರಧಾನಿಯಾಗಿ ಎರಡನೇ ಅವಧಿಗೆ ಆಯ್ಕೆಯಾಗಿದ್ದಾರೆ?

ಅ) ಬಾರ್ಬಡೋಸ್

ಆ) ಮಡಗಾಸ್ಕರ್

ಇ) ಸೊಮಾಲಿ

ಈ) ನೈರೋಬಿ

ಬಾರ್ಬಡೋಸ್

"ಮಿಯಾ ಮೊಟ್ಲಿ" ರವರು ಬಾರ್ಬಡೋಸ್ ರಾಷ್ಟ್ರದ ಪ್ರಧಾನಿಯಾಗಿ ಎರಡನೇ ಅವಧಿಗೆ ಅಧಿಕಾರ ವಹಿಸಿಕೊಂಡರು.

130. ಭಾರತ ಮತ್ತು ಯಾವ ದೇಶದ ನಡುವಿನ ರಾಜತಾಂತ್ರಿಕ ಸಂಬಂಧಕ್ಕೆ 2022ರಲ್ಲಿ 70 ವರ್ಷ ಪೂರೈಸಿದೆ?

ಅ) ಜಪಾನ್

ಆ) ಆಸ್ಟ್ರೇಲಿಯಾ

ಇ) ಅಮೆರಿಕ

ಈ) ಸ್ಪೇನ್

ಜಪಾನ್

ಭಾರತ ಮತ್ತು ಜಪಾನ್ ನಡುವಿನ ರಾಜತಾಂತ್ರಿಕ ಸಂಬಂಧ 70 ವರ್ಷ ಪೂರೈಸಿತು. ಉಭಯ ದೇಶಗಳ ನಡುವೆ ರಾಜತಾಂತ್ರಿಕ ಸಂಬಂಧ ಏಪ್ರಿಲ್ 28, 1952ರಲ್ಲಿ ಪ್ರಾರಂಭಗೊಂಡಿತು.

131. ಇವರಲ್ಲಿ ಯಾರಿಗೆ ಪದ್ಮವಿಭೂಷಣ ಪ್ರಶಸ್ತಿಯನ್ನು 2022 ರಲ್ಲಿ ಮರಣೋತ್ತರವಾಗಿ ನೀಡಿಲ್ಲ?

ಅ) ಪ್ರಭಾ ಅತ್ರೆ

ಆ) ರಾಧೇಶ್ಯಾಮ್ ಖೆಮ್ಕಾ

ಇ) ಬಿಪಿನ್ ರಾವತ್

ಈ) ಕಲ್ಯಾಣ್ ಸಿಂಗ್

ಪ್ರಭಾ ಅತ್ರೆ

ದೇಶದ ಎರಡನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮವಿಭೂಷಣ ಪ್ರಶಸ್ತಿಯನ್ನು ಈ ಬಾರಿ 4 ಜನರಿಗೆ ನೀಡಲಾಗಿದೆ. ಮಹಾರಾಷ್ಟ್ರದ ಪ್ರಭಾ ಅತ್ರೆ ರವರಿಗೆ ಹಾಗೂ ಮರಣೋತ್ತರವಾಗಿ ರಾಧೇಶ್ಯಾಮ್ ಖೆಮ್ಕಾ (ಶಿಕ್ಷಣ & ಸಾಹಿತ್ಯ), ಬಿಪಿನ್ ರಾವತ್ (ನಾಗರಿಕ ಸೇವೆ) ಮತ್ತು ಕಲ್ಯಾಣ್ ಸಿಂಗ್ (ರಾಜಕೀಯ) ರವರಿಗೆ ನೀಡಲಾಗಿದೆ.

132. ಭಾರತದ ಮೊದಲ "ಗ್ರಾಫೀನ್ ಆವಿಷ್ಕಾರ ಕೇಂದ್ರ (Graphene Innovation Centre)" ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಕರ್ನಾಟಕ

ಆ) ತೆಲಂಗಣ

ಇ) ಕೇರಳ

ಈ) ಗುಜರಾತ್

ಕೇರಳ

ಭಾರತದ ಮೊದಲ ಗ್ರಾಫೀನ್ ಆವಿಷ್ಕಾರ ಕೇಂದ್ರ ಕೇರಳದಲ್ಲಿ ಸ್ಥಾಪನೆಯಾಗಲಿದೆ. ಕೇರಳದ ಡಿಜಿಟಲ್ ಯೂನಿವರ್ಸಿಟಿ ಹಾಗೂ ಸೆಂಟರ್ ಫಾರ್ ಮೆಟರಿಯಲ್ಸ್ ಫಾರ್ ಎಲೆಕ್ಟ್ರಾನಿಕ್ಸ್ ಟೆಕ್ನಾಲಜಿ (C-MET), ತ್ರಿಶೂರ್ ಜಂಟಿಯಾಗಿ ಸ್ಥಾಪನೆ ಮಾಡಲಿವೆ.

Karunaduexams.com

133. ಟ್ರಾನ್ಸ್ ಪರೆನ್ಸಿ ಇಂಟರ್ ನ್ಯಾಷನಲ್ನ 2021ನೇ ಸಾಲಿನ ಭ್ರಷ್ಟಚಾರ ಸೂಚ್ಯಂಕದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 85

ಆ) 79

ಇ) 63

ಈ) 89

85

ಟ್ರಾನ್ಸ್ ಪರೆನ್ಸಿ ಇಂಟರ್ ನ್ಯಾಷನಲ್ನ 2021ನೇ ಸಾಲಿನ ಭ್ರಷ್ಟಚಾರ ಸೂಚ್ಯಂಕದಲ್ಲಿ 40 ಅಂಕಗಳನ್ನು ಪಡೆದುಕೊಳ್ಳುವ ಮೂಲಕ ಭಾರತ 85ನೇ ಸ್ಥಾನವನ್ನು ಪಡೆದುಕೊಂಡಿದೆ. 180 ದೇಶಗಳ ಪಟ್ಟಿಯಲ್ಲಿ ಭಾರತ 85ನೇ ಸ್ಥಾನವನ್ನು ಪಡೆದುಕೊಂಡಿದೆ. ನಾರ್ವೆ, ಸಿಂಗಾಪುರ ಮತ್ತು ಸ್ವೀಡನ್ ಕಡಿಮೆ ಭ್ರಷ್ಟಚಾರ ಹೊಂದಿರುವ ಮೊದಲ ಮೂರು ರಾಷ್ಟ್ರಗಳಾಗಿವೆ. ಅಫ್ಘಾನಿಸ್ತಾನ ಕೊನೆಯ ಸ್ಥಾನದಲ್ಲಿದೆ.

134. ಕೇಂದ್ರ ಸರ್ಕಾರ ಇತ್ತೀಚೆಗೆ ಪಂಜಾಬ್ ಅಂಡ್ ಮಹಾರಾಷ್ಟ್ರ ಕೋಆಪರೇಟಿವ್ ಬ್ಯಾಂಕ್ (PMC) ಅನ್ನು ಯಾವ ಬ್ಯಾಂಕಿನೊಂಗಿದೆ ವಿಲೀನಿಗೊಳಿಸಲು ಅನುಮತಿಸಿದೆ?

ಅ) ನಬಾರ್ಡ್

ಆ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಇ) ಸ್ಮಾಲ್ ಫೈನಾನ್ಸ್ ಬ್ಯಾಂಕ್

ಈ) ಹೆಚ್ ಡಿ ಎಫ್ ಸಿ

ಸ್ಮಾಲ್ ಫೈನಾನ್ಸ್ ಬ್ಯಾಂಕ್

135. ಅಂತರಾಷ್ಟ್ರೀ ಹಣಕಾಸು ನಿಧಿ (IMF) 2022ರಲ್ಲಿ ಭಾರತದ ಆರ್ಥಿಕ ಬೆಳವಣಿಗೆಯನ್ನು ಶೇ 9.5% ರಷ್ಟರಿಂದ ಎಷ್ಟಕ್ಕೆ ಕಡಿತಗೊಳಿಸಿದೆ?

ಅ) 7.2%

ಆ) 8.5%

ಇ) 9.0%

ಈ) 9.2%

9.0%

ಪ್ರಸಕ್ತ 2022ನೇ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕ ಪ್ರಗತಿಯನ್ನು ಅಂತರಾಷ್ಟ್ರೀಯ ಹಣಕಾಸು ನಿಧಿ ಶೇ 9.0% ಇರಲಿದೆ ಎಂದು ಅಂದಾಜಿಸಿದೆ. ಅಕ್ಟೋಬರ್, 2021 ರಲ್ಲಿ ಭಾರತದ ಜಿಡಿಪಿ 2022ನೇ ಸಾಲಿನಲ್ಲಿ ಶೇ 9.5% ಇರಲಿದೆ ಎಂದು ಐಎಂಎಫ್ ತಿಳಿಸಿತ್ತು.

136. ಆರೋಗ್ಯ ಸಂಶೋಧನಾ ಯೋಜನೆಗಳಲ್ಲಿ ಜಂಟಿಯಾಗಿ ಕಾರ್ಯನಿರ್ವಹಿಸುವ ಸಲುವಾಗಿ ಭಾರತ ಮತ್ತು ಯಾವ ದೇಶ ಒಪ್ಪಂದಕ್ಕೆ ಸಹಿ ಮಾಡಿವೆ?

ಅ) ಜಪಾನ್

ಆ) ಸಿಂಗಪುರ

ಇ) ಫ್ರಾನ್ಸ್

ಈ) ಸ್ಪೇನ್

ಫ್ರಾನ್ಸ್

ಭಾರತ ಮತ್ತು ಫ್ರಾನ್ಸ್ ಆರೋಗ್ಯ ಸಂಶೋಧನಾ ಯೋಜನೆಗಳಲ್ಲಿ ಜಂಟಿಯಾಗಿ ಕಾರ್ಯನಿರ್ವಹಿಸುವ ಸಲುವಾಗಿ ಒಪ್ಪಂದಕ್ಕೆ ಸಹಿ ಮಾಡಿವೆ. ಭಾರತದ CSIR ಮತ್ತು ಫ್ರಾನ್ಸ್ನ ಇನ್ಸ್ಟಿಟ್ಯೂಟ್ ಆಫ್ ಫಾಶ್ಚರ್ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಇದರಡಿ ಉಭಯ ದೇಶಗಳು ವಿವಿಧ ರೀತಿಯ ಕಾಯಿಲೆಗಳು ಸೇರಿದಂತೆ ಕಡಿಮೆ ವೆಚ್ಚದಲ್ಲಿ ಆರೋಗ್ಯ ಚಿಕಿತ್ಸೆ ನೀಡುವ ವಿಧಾನದ ಮೇಲೆ ಸಂಶೋಧನೆ ನಡೆಸಲಿವೆ.

karunaduexams.com

137. “ಪಶ್ಚಿಮ್ ಲೇಹರ್ (XPL-2022)” ಕಡಲ ಸಮರಭ್ಯಾಸವನ್ನು ಈ ಕೆಳಗಿನ ಯಾವುದು ಆಯೋಜಿಸಿತ್ತು?

ಅ) ಪಶ್ಚಿಮ ನೌಕಾ ಕಮಾಂಡ್

ಆ) ಪೂರ್ವ ನೌಕಾ ಕಮಾಂಡ್

ಇ) ದಕ್ಷಿಣ ನೌಕಾ ಕಮಾಂಡ್

ಈ) ಉತ್ತರ ನೌಕಾ ಕಮಾಂಡ್

ಪಶ್ಚಿಮ ನೌಕಾ ಕಮಾಂಡ್

ಪಶ್ಚಿಮ ನೌಕಾ ಕಮಾಂಡ್ ಪಶ್ಚಿಮ್ ಲೇಹರ್ ಜಂಟಿ ಕಡಲ ಸಮರಭ್ಯಾಸವನ್ನು ಅರಬ್ಬಿ ಸಮುದ್ರದಲ್ಲಿ ಆಯೋಜಿಸಿತ್ತು. ಭಾರತದ ನೌಕ ಪಡೆ, ಸೇನಾ ಪಡೆ ಮತ್ತು ವಾಯು ಪಡೆ ಮತ್ತು ಕರಾವಳಿ ತೀರ ಪಡೆಗಳು ಈ ಸಮರಭ್ಯಾಸದಲ್ಲಿ ಭಾಗವಹಿಸಿದ್ದವು.

138. “CSIR ಮತ್ತು ಕೇಂದ್ರಿಯ ಡ್ರಗ್ ರಿಸರ್ಚ್ ಇನ್ಸ್ಟಿಟ್ಯೂಟ್”ನ ವಿಜ್ಞಾನಿಗಳು ಅಭಿವೃದ್ದಿಪಡಿಸಿರುವ RT-PCR ಟೆಸ್ಟ್ ಕಿಟ್ ಹೆಸರೇನು?

ಅ) ಓಂ

ಆ) ರಕ್ಷಣ್

ಇ) ಜೀವನ್

ಈ) ಇಂಡ್

ಓಂ

ಕೌನ್ಸಿಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರೀಯಲ್ ರಿಸರ್ಚ್ ಮತ್ತು ಕೇಂದ್ರಿಯ ಡ್ರಗ್ ರಿಸರ್ಚ್ ಇನ್ಸ್ಟಿಟ್ಯೂಟ್”ನ ವಿಜ್ಞಾನಿಗಳು ಒಮಿಕ್ರಾನ್ ಪತ್ತೆಹಚ್ಚುವ RT-PCR ಟೆಸ್ಟ್ ಕಿಟ್ ಅಭಿವೃದ್ದಿಪಡಿಸಿದ್ದು, ಇದಕ್ಕೆ INDICoV-OmTM ಎಂದು ಹೆಸರಿಡಲಾಗಿದೆ. ದೇಶದ ಸರ್ಕಾರಿ ಸಂಸ್ಥೆ ಅಭಿವೃದ್ದಿಪಡಿಸಿರುವ ಮೊದಲ ಕೋವಿಡ್ ಕಿಟ್ ಎನಿಸಿದೆ.

139. ಆಡಳಿತದಲ್ಲಿ ಸುಧಾರಣೆ ತರಲು ಯಾವ ರಾಜ್ಯ ಹೊಸದಾಗಿ 13 ಜಿಲ್ಲೆಗಳನ್ನು ರಚಿಸಲು ಅಧಿಸೂಚನೆಯನ್ನು ಹೊರಡಿಸಿದೆ?

ಅ) ಆಂಧ್ರ ಪ್ರದೇಶ

ಆ) ತೆಲಂಗಣ

ಇ) ಉತ್ತರ ಪ್ರದೇಶ

ಈ) ಒಡಿಶಾ

ಆಂಧ್ರ ಪ್ರದೇಶ

ಆಡಳಿತದಲ್ಲಿ ಸುಧಾರಣೆ ತರುವ ಸಲುವಾಗಿ ಜಗನ್ ಮೋಹನ್ ನೇತೃತ್ವದ ಆಂಧ್ರ ಪ್ರದೇಶ ಸರ್ಕಾರ ಹೊಸದಾಗಿ 13 ಜಿಲ್ಲೆಗಳನ್ನು ರಚಿಸಲು ಅಧಿಸೂಚನೆಯನ್ನು ಹೊರಡಿಸಿದೆ. ತೆಲುಗು ಹೊಸ ವರ್ಷ ಯುಗಾದಿಯ ಬಳಿಕ ಹೊಸ ಜಿಲ್ಲೆಗಳು ಕಾರ್ಯಾರಂಭ ಮಾಡಲಿವೆ. ಹೊಸ ಜಿಲ್ಲೆಗಳಿಂದ ರಾಜ್ಯದಲ್ಲಿ

140. ವಿಶಿಷ್ಟ ವಿನ್ಯಾಸಕ್ಕಾಗಿ “RIBA (Royal Institute of British Architects)” ಪ್ರಶಸ್ತಿ ಯಾವ ಆಸ್ಪತ್ರೆಗೆ ನೀಡಲಾಗಿದೆ?

ಅ) ಫ್ರೆಂಡ್ ಶಿಪ್ ಆಸ್ಪತ್ರೆ

ಆ) ಅಪೊಲೊ ಆಸ್ಪತ್ರೆ

ಇ) ಡಾಕಾ ಕಮ್ಯೂನಿಟಿ ಆಸ್ಪತ್ರೆ

ಈ) ಮಿಲೇನಿಯಂ ಆಸ್ಪತ್ರೆ

ಫ್ರೆಂಡ್ ಶಿಪ್ ಆಸ್ಪತ್ರೆ

ಬಾಂಗ್ಲದೇಶದ ಫ್ರೆಂಡ್ ಶಿಪ್ ಆಸ್ಪತ್ರೆಯ ವಿಶಿಷ್ಟ ವಿನ್ಯಾಸಕ್ಕಾಗಿ "RIBA (Royal Institute of British Architects)" ಪ್ರಶಸ್ತಿಯನ್ನು ನೀಡಲಾಗಿದೆ.

141. ಇತ್ತೀಚೆಗೆ ಸುದ್ದಿಯಲ್ಲಿದ್ದ "ರಾಮಗಢ ವಿಶ್ಧಾರಿ ವನ್ಯಜೀವಿ ಅಭಯಾರಣ್ಯ" ಯಾವ ರಾಜ್ಯದಲ್ಲಿದೆ?

ಅ) ಗುಜರಾತ್
ಆ) ರಾಜಸ್ತಾನ್
ಇ) ಮಹಾರಾಷ್ಟ್ರ
ಈ) ಚತ್ತೀಸಗಡ

ರಾಜಸ್ತಾನ್

ರಾಜಸ್ತಾನದ ರಾಮಗಢ ವಿಶ್ಧಾರಿ ವನ್ಯಜೀವಿ ಅಭಯಾರಣ್ಯವನ್ನು ಹುಲಿ ಸಂರಕ್ಷಣ ತಾಣವಾಗಿ ಘೋಷಿಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. ರಷ್ಯಾದಲ್ಲಿ ನಡೆಯಲಿರುವ ಜಾಗತಿಕ ಹುಲಿ ಸಮ್ಮೇಳನಕ್ಕೂ ಮುಂಚೆ ಘೋಷಣೆ ಆಗುವ ಸಾಧ್ಯತೆ ಇದೆ. ಇದು ರಾಜಸ್ತಾನದ ನಾಲ್ಕನೇ ಹುಲಿ ಸಂರಕ್ಷಣೆ ತಾಣ ಆಗಲಿದೆ. ಕರ್ನಾಟಕದ ಎಂಎಂ ಹಿಲ್ಸ್ ಹಾಗೂ ಚತ್ತೀಸಗಡದ ಗುರು ಘಾಸಿ ದಾಸ್ ರಾಷ್ಟ್ರೀಯ ಉದ್ಯಾನವನ್ನು ಸಹ ಹುಲಿ ಸಂರಕ್ಷಣ ತಾಣವೆಂದು ಘೋಷಿಸಲಾಗುವುದು.

142. ಹೊಸದಾಗಿ ಪತ್ತೆಹಚ್ಚಲಾದ "Protoblepharus Apatani" ಒಂದು________?

ಅ) ಹಲ್ಲಿ
ಆ) ಹಾವು
ಇ) ಕಪ್ಪೆ
ಈ) ಜೇಡ

ಹಲ್ಲಿ

Protoblepharus Apatani ಎಂಬ ಹೊಸ ಹಲ್ಲಿ ಪ್ರಭೇದವನ್ನು ರಷ್ಯಾ ಮತ್ತು ಭಾರತದ ವಿಜ್ಞಾನಿಗಳು ಪತ್ತೆ ಹಚ್ಚಿದ್ದಾರೆ. ಅರುಣಾಚಲ ಪ್ರದೇಶದ ಟಲ್ಲೆ ವ್ಯಾಲಿ ವನ್ಯಜೀವಿ ಅಭಯಾರಣ್ಯದಲ್ಲಿ ಈ ಹೊಸ ಹಲ್ಲಿ ಪ್ರಭೇದವನ್ನು ಗುರುತಿಸಲಾಗಿದೆ.

143. ಇತ್ತೀಚೆಗೆ ಭಾರತ ಮತ್ತು ಮುಂದಿನ ಯಾವ ದೇಶ ಸ್ಟಾರ್ಟ್ ಆಪ್ಗಳನ್ನು ಉತ್ತೇಜಿಸುವ ಸಲುವಾಗಿ 150 ಮಿಲಿಯನ್ ಡಾಲರ್ ಬಂಡವಾಳ ನಿಧಿಯನ್ನು ಪ್ರಾರಂಭಿಸಲು ಸಹಿ ಹಾಕಿವೆ?

ಅ) ಇಸ್ರೇಲ್
ಆ) ಜಪಾನ್
ಇ) ಯುಎಇ
ಈ) ಕೆನಡಾ

ಯುಎಇ

ಭಾರತ ಮತ್ತು ಯುಎಇ ಸ್ಟಾರ್ಟ್ ಆಪ್ಗಳನ್ನು ಉತ್ತೇಜಿಸುವ ಸಲುವಾಗಿ 150 ಮಿಲಿಯನ್ ಡಾಲರ್ ಬಂಡವಾಳ ನಿಧಿಯನ್ನು ಪ್ರಾರಂಭಿಸಲು ಸಹಿ ಹಾಕಿವೆ. ದುಬೈನಲ್ಲಿ ನಡೆದ EXPO2020 ಸಮಾರಂಭದಲ್ಲಿ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು.

karunaduexams.com

144. “A Little Book of India: Celebrating 75 Years of Independence” ಪುಸ್ತಕದ ಲೇಖಕರು ಯಾರು?
ಅ) ರಸ್ಕಿನ್ ಬಾಂಡ್
ಆ) ರಾಮಚಂದ್ರ ಗುಹ
ಇ) ರಂಜನ್ ಗೋಗಯ್
ಈ) ರತನ್ ಟಾಟ
ರಸ್ಕಿನ್ ಬಾಂಡ್

145. ಇತ್ತೀಚೆಗೆ ನಿಧನರಾದ “ಚರಣ್ ಜಿತ್ ಸಿಂಗ್” ಯಾವ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದರು?
ಅ) ಕ್ರೀಡೆ
ಆ) ಸಿನಿಮಾ
ಇ) ರಾಜಕೀಯ
ಈ) ಸಾಹಿತ್ಯ
ಕ್ರೀಡೆ
ಎರಡು ಬಾರಿ ಒಲಂಪಿಕ್ಸ್ ಪದಕ ಗೆದ್ದಿದ್ದ, ಪದ್ಮಶ್ರೀ ಪುರಸ್ಕೃತ ಚರಣ್ ಜಿತ್ ಸಿಂಗ್ ರವರು ವಯೋ ಸಹಜ ಅನಾರೋಗ್ಯದಿಂದ ನಿಧನರಾದರು. ಅರ್ಜುನ್ ಪ್ರಶಸ್ತಿ ವಿಜೇತರೂ ಆಗಿರುವ ಸಿಂಗ್ ರವರು 1964 ಟೋಕಿಯೋ ಒಲಂಪಿಕ್ಸ್ ನಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದರು.

146. ಕಳೆದ ಕೆಲವು ವರ್ಷಗಳಿಂದ ಭಾರತದ ದಾಳಿಂಬೆಗೆ ಪ್ರಸಿದ್ಧ ತಾಣವಾಗಿ ಯಾವ ದೇಶ ಹೊರಹೊಮ್ಮಿದೆ?
ಅ) ಬಾಂಗ್ಲದೇಶ
ಆ) ಶ್ರೀಲಂಕಾ
ಇ) ಪಾಕಿಸ್ತಾನ
ಈ) ಅಫ್ಘಾನಿಸ್ತಾನ
ಬಾಂಗ್ಲದೇಶ
ಭಾರತದಲ್ಲಿ ಬೆಳೆಯುವ ದಾಳಿಂಬೆಗೆ ಬಾಂಗ್ಲದೇಶ ಪ್ರಸಿದ್ಧ ರಫ್ತು ತಾಣವಾಗಿ ಹೊರಹೊಮ್ಮಿದೆ. ಕಳೆದ ವರ್ಷದಲ್ಲಿ 68,502 ಟನ್ ಗಳಷ್ಟು ದಾಳಿಂಬೆಯನ್ನು ಭಾರತದಿಂದ ರಫ್ತು ಮಾಡಲಾಗಿದ್ದು, ಇದರಲ್ಲಿ 36,906.77 ಟನ್ ಗಳಷ್ಟು ದಾಳಿಂಬೆಯನ್ನು ಬಾಂಗ್ಲದೇಶಕ್ಕೆ ರಫ್ತು ಮಾಡಲಾಗಿದೆ.

147. ಭಾರತದ ಅತಿ ದೊಡ್ಡ ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಸ್ಟೇಷನ್ ಅನ್ನು ಎಲ್ಲಿ ಸ್ಥಾಪಿಸಲಾಗಿದೆ?
ಅ) ಗುರುಗ್ರಾಮ
ಆ) ಹೈದ್ರಾಬಾದ್
ಇ) ಚೆನ್ನೈ
ಈ) ಪುಣೆ
ಗುರುಗ್ರಾಮ
ನ್ಯಾಷನಲ್ ಹೈವೆ ಫಾರ್ ಎಲೆಕ್ಟ್ರಿಕಲ್ ವೆಹಿಕಲ್ಸ್ ಭಾರತದ ಅತಿ ದೊಡ್ಡ ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಸ್ಟೇಷನ್ ಅನ್ನು ಗುರುಗ್ರಾಮದಲ್ಲಿ ಸ್ಥಾಪಿಸಿದೆ. ಈ ಚಾರ್ಜಿಂಗ್ ಸ್ಟೇಷನ್ ನಲ್ಲಿ 100 ಚಾರ್ಜಿಂಗ್ ಪಾಯಿಂಟ್ ಗಳಿದ್ದು, 74 ಎಸಿ ಹಾಗೂ 24 ಡಿಸಿ ಚಾರ್ಜರ್ ಗಳನ್ನು ಒಳಗೊಂಡಿದೆ.

karunaduexams.com

148. ಯಾವ ದೇಶ 2022 ಮಹಿಳೆಯರ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು?
ಅ) ಭಾರತ
ಆ) ಶ್ರೀಲಂಕಾ
ಇ) ಜಪಾನ್
ಈ) ಚೀನಾ
ಜಪಾನ್
ದಕ್ಷಿಣ ಕೊರಿಯಾವನ್ನು ಮಣಿಸುವ ಮೂಲಕ ಜಪಾನ್ 2022 ಮಹಿಳೆಯರ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಭಾರತ ತಂಡ ಚೀನಾ ದೇಶವನ್ನು ಸೋಲಿಸಿ ಕಂಚಿನ ಪದಕಕ್ಕೆ ತೃಪ್ತಿಪಟ್ಟಿಕೊಂಡಿತು.

149. ಈ ಕೆಳಗಿನ ಯಾವ ಹುಲಿ ಸಂರಕ್ಷಣ ತಾಣಕ್ಕೆ ಪ್ರತಿಷ್ಠಿತ “TX2” ಪ್ರಶಸ್ತಿಯನ್ನು ನೀಡಲಾಗಿದೆ?
ಅ) ಸತ್ಯಮಂಗಲಂ ಹುಲಿ ಸಂರಕ್ಷಣಾ ತಾಣ
ಆ) ತಡೋಬ ಅಂಧಾರಿ ಹುಲಿ ಸಂರಕ್ಷಣಾ ತಾಣ
ಇ) ಪೆಂಚ್ ಹುಲಿ ಸಂರಕ್ಷಣಾ ತಾಣ
ಈ) ನಾಗರಹೊಳೆ ಹುಲಿ ಸಂರಕ್ಷಣಾ ತಾಣ
ಸತ್ಯಮಂಗಲಂ ಹುಲಿ ಸಂರಕ್ಷಣಾ ತಾಣ
ತಮಿಳುನಾಡಿನ ಈರೋಡ್ ಜಿಲ್ಲೆಯಲ್ಲಿರುವ ಸತ್ಯಮಂಗಲಂ ಹುಲಿ ಸಂರಕ್ಷಣಾ ತಾಣಕ್ಕೆ ಪ್ರತಿಷ್ಠಿತ TX2 ಪ್ರಶಸ್ತಿಯನ್ನು ನೀಡಲಾಗಿದೆ. ಸತ್ಯಮಂಗಲಂ ಹುಲಿ ಸಂರಕ್ಷಣಾ ತಾಣ ಸುಮಾರು 80 ಹುಲಿಗಳನ್ನು ಹೊಂದಿದೆ. ನೇಪಾಳದ ಬರ್ದಿಯಾ ರಾಷ್ಟ್ರೀಯ ಉದ್ಯಾನವಕ್ಕೂ ಸಹ ಈ ಪ್ರಶಸ್ತಿಯನ್ನು ನೀಡಲಾಗಿದೆ.

150. ಯಾವ ರಾಜ್ಯ ದೇಶದಲ್ಲಿ ಅತಿ ಹೆಚ್ಚು “ಪರಿಶಿಷ್ಠ ಜಾತಿ (SC) ಉದ್ಯಮಿಗಳನ್ನು” ಹೊಂದಿದೆ?
ಅ) ಮಧ್ಯ ಪ್ರದೇಶ
ಆ) ಕರ್ನಾಟಕ
ಇ) ಮಹಾರಾಷ್ಟ್ರ
ಈ) ಬಿಹಾರ
ಮಹಾರಾಷ್ಟ್ರ
ಮಹಾರಾಷ್ಟ್ರ ದೇಶದಲ್ಲಿ ಅತಿ ಹೆಚ್ಚು ಪರಿಶಿಷ್ಠ ಜಾತಿ ಉದ್ಯಮಿಗಳನ್ನು ಹೊಂದಿದೆ. 96805 ಕಿರು, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಒಡೆತನವನ್ನು ಪರಿಶಿಷ್ಠ ಜಾತಿ ಉದ್ಯಮಿಗಳು ಹೊಂದಿದ್ದಾರೆ. ತಮಿಳುನಾಡು ಮತ್ತು ರಾಜಸ್ತಾನ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ.

151. ಈ ಕೆಳಗಿನ ಯಾರನ್ನು ಕೇಂದ್ರ ಸರ್ಕಾರದ “ಮುಖ್ಯ ಆರ್ಥಿಕ ಸಲಹೆಗಾರರಾಗಿ” ನೇಮಕ ಮಾಡಲಾಗಿದೆ?
ಅ) ಕೃಷ್ಣಮೂರ್ತಿ ಸುಬ್ರಮಣಿಯನ್
ಆ) ಡಾ. ವಿ. ಅನಂತ ನಾಗೇಶ್ವರನ್
ಇ) ಸಂಜೀವ್ ಸನ್ಯಾಲ್
ಈ) ರಮೇಶ್ ಕಾರ್ತಿಕೇಯನ್
ಡಾ. ವಿ. ಅನಂತ ನಾಗೇಶ್ವರನ್
ಡಾ. ವಿ. ಅನಂತ ನಾಗೇಶ್ವರನ್ ರವರನ್ನು ಕೇಂದ್ರ ಸರ್ಕಾರದ “ಮುಖ್ಯ ಆರ್ಥಿಕ ಸಲಹೆಗಾರರಾಗಿ” ನೇಮಕ ಮಾಡಲಾಗಿದೆ. ಮುಖ್ಯ ಆರ್ಥಿಕ ಸಲಹೆಗಾರರಾಗಿದ್ದ ಕೃಷ್ಣಮೂರ್ತಿ ಸುಬ್ರಮಣಿಯನ್ ರವರು ರಾಜೀನಾಮೆ ನೀಡಿದ್ದ ಹಿನ್ನಲೆಯಲ್ಲಿ ಈ ಹುದ್ದೆ ತೆರವಾಗಿತ್ತು.

Karunaduexams.com

152. ಯಾವ ದೇಶದ ಸಹಾಯದೊಂದಿಗೆ ಭಾರತ 150 ಗ್ರಾಮಗಳನ್ನು “Villages of Excellence” ಆಗಿ ಪರಿವರ್ತಿಸಲಿದೆ?
ಅ) ಈಜಿಪ್ಟ್
ಆ) ಇಸ್ರೇಲ್
ಇ) ಸ್ವೀಡನ್
ಈ) ಆಸ್ಟ್ರೇಲಿಯಾ
ಇಸ್ರೇಲ್
ಇಸ್ರೇಲಿನ ತಾಂತ್ರಿಕ ಸಹಯೋಗದೊಂದಿಗೆ 12 ರಾಜ್ಯಗಳಲ್ಲಿ 150 ಗ್ರಾಮಗಳನ್ನು ವಿಲೇಜ್ ಆಫ್ ಎಕ್ಸಲೆನ್ಸ್ ಆಗಿ ಪರಿವರ್ತಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈಗಾಗಲೇ ಇಸ್ರೇಲ್ ಸಹಯೋಗದೊಂದಿಗೆ 12 ರಾಜ್ಯಗಳಲ್ಲಿ 29 ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪಿಸಲಾಗಿದೆ.

153. ಜನವರಿ 30, 2022 ರಂದು ಆಚರಿಸಲಾದ “ವಿಶ್ವ ಕುಷ್ಠ ರೋಗ (World Leprosy Day)” ದಿನದ ಧ್ಯೇಯವಾಕ್ಯ ___?
ಅ) ಯುನೈಟೆಡ್ ಫಾರ್ ಡಿಗ್ನಿಟಿ
ಆ) ಟಚ್ ವಿತ್ ಡಿಗ್ನಿಟಿ
ಇ) ಎಮೋಷನ್ ಅಂಡ್ ಡಿಗ್ನಿಟಿ
ಈ) ಜಸ್ಟೀಸ್ ಫಾರ್ ಡಿಗ್ನಿಟಿ
ಯುನೈಟೆಡ್ ಫಾರ್ ಡಿಗ್ನಿಟಿ
ವಿಶ್ವ ಕುಷ್ಠರೋಗ ದಿನವನ್ನು ಪ್ರತಿ ವರ್ಷ ಜನವರಿ ತಿಂಗಳ ಕೊನೆಯ ಭಾನುವಾರರಂದು ಆಚರಿಸಲಾಗುತ್ತದೆ. ಕುಷ್ಠರೋಗ ನಿರ್ಮೂಲನೆ ಹಾಗೂ ಕುಷ್ಠರೋಗಿಗಳ ಮೇಲಿನ ತಾರತಮ್ಯವನ್ನು ಹೋಗಲಾಡಿಸುವುದು ಈ ದಿನದ ಆಚರಣೆಯ ಮಹತ್ವ. ಯುನೈಟೆಡ್ ಫಾರ್ ಡಿಗ್ನಿಟಿ ಈ ವರ್ಷದ ಧ್ಯೇಯವಾಕ್ಯ.

154. 21 ಬಾರಿ ಗ್ರಾಂಡ್ ಸ್ಲಾಮ್ ಪ್ರಶಸ್ತಿ ಗೆದ್ದು ವಿಶ್ವ ದಾಖಲೆ ನಿರ್ಮಿಸಿದ ಟೆನಿಸ್ ಆಟಗಾರ ಯಾರು?
ಅ) ರಾಫೆಲ್ ನಡಾಲ್
ಆ) ರೋಜರ್ ಫೆಡರರ್
ಇ) ಡ್ಯಾನಿಲ್ ಮೆಡ್ವಿಡೆವ್
ಈ) ನೊವಾಕ್ ಜೊಕೊವಿಕ್
ರಾಫೆಲ್ ನಡಾಲ್
ಸ್ಪೇನ್ ನ ಖ್ಯಾತ ಟೆನಿಸ್ ಆಟಗಾರ ರಾಫೆಲ್ ನಡಾಲ್ ರವರು ಪ್ರಸಕ್ತ ಸಾಲಿನ ಆಸ್ಟ್ರೇಲಿಯನ್ ಓಪನ್ ನಲ್ಲಿ ರಷ್ಯಾದ ಡ್ಯಾನಿಲ್ ಮೆಡ್ವಿಡೆವ್ ರವರನ್ನು ಮಣಿಸಿ 21ನೇ ಬಾರಿಗೆ ಗ್ರಾಂಡ್ ಸ್ಲ್ಯಾಮ್ ಪ್ರಶಸ್ತಿಯನ್ನು ಗೆದ್ದು ವಿಶ್ವದಾಖಲೆ ನಿರ್ಮಿಸಿದರು.

155. “ಅಂಟೋನಿಯೊ ಕೋಸ್ಟ” ರವರು ಯಾವ ದೇಶದ ಪ್ರಧಾನಿಯಾಗಿ ಆಯ್ಕೆ ಆಗಿದ್ದಾರೆ?
ಅ) ಮಾರಿಷಸ್
ಆ) ಪೋರ್ಚುಗಲ್
ಇ) ಇಟಲಿ
ಈ) ಸ್ಪೇನ್
ಪೋರ್ಚುಗಲ್
ಪೋರ್ಚುಗಲ್ ನ ಆಡಳಿತ ಸೋಷಿಯಲ್ ಪಕ್ಷ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಬಹುಮತದೊಂದಿಗೆ ಜಯಗಳಿಸಿದ್ದು, ಪಕ್ಷದ ನಾಯಕ ಅಂಟೋನಿಯೋ ಕೋಸ್ಟ ರವರು ಎರಡನೇ ಬಾರಿಗೆ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ.

156. ಒಡಿಶಾ ಓಪನ್ ಚಾಂಪಿಯನ್ ಶಿಪ್ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸುವ ಮೂಲಕ ಸೂಪರ್ 100 ಟೂರ್ನಮೆಂಟ್ ಗೆದ್ದ ಭಾರತದ ಕಿರಿಯ ಶಟ್ಲರ್ ಆಗಿ ದಾಖಲೆ ಬರೆದವರು ಯಾರು?

ಅ) ಉನ್ನತಿ ಹೂಡ

ಆ) ಸ್ಮಿತ್ ತೋಷ್ನಿವಾಲ್

ಇ) ಗಾಯಿತ್ರಿ ಗೋಪಿಚಂದ್

ಈ) ತ್ರಿಶಾ ಜಾಲಿ

ಉನ್ನತಿ ಹೂಡ

ಒಡಿಶಾ ಓಪನ್ ಚಾಂಪಿಯನ್ ಶಿಪ್ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಉನ್ನತಿ ಹೂಡ ರವರು ಭಾರತದವರೇ ಆದ ಸ್ಮಿತ್ ತೋಷ್ನಿವಾಲ್ ರವರನ್ನ ಸೋಲಿಸಿ ಒಡಿಶಾ ಓಪನ್ ಚಾಂಪಿಯನ್ ಷಿಪ್ ನಲ್ಲಿ ವಿಜೇತರಾದರು. ಆ ಮೂಲಕ ಸೂಪರ್ 100 ಟೂರ್ನಮೆಂಟ್ ಗೆದ್ದ ಭಾರತದ ಕಿರಿಯ ಶಟ್ಲರ್ ಆಗಿ ದಾಖಲೆ ಬರೆದರು.

157. ಇತ್ತೀಚಿನ ಸಂಶೋಧನೆ ಪ್ರಕಾರ ಪೆರುವಿಯನ್ ಅಮೆಜಾನ್ ಪ್ರಧೇಶದ ವಾತಾವರಣದ ಪಾದರಸ ಮಾಲಿನ್ಯಕ್ಕೆ ಕಾರಣವೇನು?

ಅ) ಚಿನ್ನ ಗಣಿಗಾರಿಕೆ

ಆ) ಕಲ್ಲಿದ್ದಲ ಗಣಿಗಾರಿಕೆ

ಇ) ವಜ್ರ ಗಣಿಗಾರಿಕೆ

ಈ) ಅರಣ್ಯನಾಶ

ಚಿನ್ನ ಗಣಿಗಾರಿಕೆ

ಇತ್ತೀಚಿನ ಸಂಶೋಧನೆ ಪ್ರಕಾರ ವಿಶ್ವದಲ್ಲಿ ಅತಿ ಹೆಚ್ಚು ವಾತಾವರಣದ ಪಾದರಸ ಮಾಲಿನ್ಯ ಪೆರುವಿಯನ್ ಅಮೆಜಾನ್ ಪ್ರದೇಶದಲ್ಲಿ ಪತ್ತೆ ಆಗಿದ್ದು, ಚಿನ್ನ ಗಣಿಗಾರಿಕೆ ಚಟುವಟಿಕೆ ಇದಕ್ಕೆ ಪ್ರಮುಖ ಕಾರಣವೆಂದು ಹೇಳಲಾಗಿದೆ.

158. ಯಾವ ಜಾಗತಿಕ ಸಂಸ್ಥೆ ವಿಶ್ವದ ಮೊದಲ "ಡಿಜಿಟಲ್ ಹಕ್ಕುಗಳು ಮತ್ತು ತತ್ವಗಳನ್ನು" ಪ್ರಸ್ತಾಪಿಸಿದೆ?

ಅ) ಯೂರೋಪಿಯನ್ ಕಮೀಷನ್

ಆ) ವಿಶ್ವಸಂಸ್ಥೆ

ಇ) ನ್ಯಾಟೋ

ಈ) ಬ್ರಿಕ್ಸ್

ಯುರೋಪಿಯನ್ ಕಮೀಷನ್

ವಿಶ್ವದಲ್ಲೇ ಮೊದಲ ಬಾರಿಗೆ ಡಿಜಿಟಲ್ ಹಕ್ಕುಗಳು ಮತ್ತು ತತ್ವಗಳನ್ನು ಯುರೋಪಿಯನ್ ಕಮೀಷನ್ ಪ್ರಸ್ತಾಪಿಸಿದೆ. ಸಾರ್ವಜನಿಕರ ಹಕ್ಕುಗಳನ್ನು ರಕ್ಷಿಸುವುದು, ಪ್ರಜಾಪ್ರಭುತ್ವವನ್ನು ಬೆಂಬಲಿಸುವುದು ಮತ್ತು ಸುರಕ್ಷಿತವಾದ ಆನ್ ಲೈನ್ ವಾತಾವರಣ ಸೃಷ್ಠಿಸುವುದು ಇದರ ಉದ್ದೇಶ.

karunaduexams.com

159. “ನೇರಳೆ ಕ್ರಾಂತಿ (Purple Mission)” ಯಾವುದಕ್ಕೆ ಸಂಬಂಧಿಸಿದೆ?
ಅ) ಮಸಾಲೆ ಬೆಳೆಗಳು
ಆ) ಸುಗಂಧ ಬೆಳೆಗಳು
ಇ) ವಾಣಿಜ್ಯ ಬೆಳೆಗಳು
ಈ) ಮೇಲಿನ ಯಾವುದು ಅಲ್ಲ
ಸುಗಂಧ ಬೆಳೆಗಳು
ಸುಗಂಧ ಬೆಳೆಗಳ ಕೃಷಿಯನ್ನು ಉತ್ತೇಜಿಸುವುದು ಅಥವಾ “ನೇರಳೆ ಕ್ರಾಂತಿ” ಕೇಂದ್ರ ಸರ್ಕಾರ ಜಾರಿಗೆ ತಂದಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಯುವ ಜನತೆಗೆ ಉದ್ಯೋಗ ಸೃಷ್ಟಿಸುವ ಸಲುವಾಗಿ ಕೇಂದ್ರ ಸರ್ಕಾರ ಮಾಹಿತಿ ಆಂದೋಲನವನ್ನು ಹಮ್ಮಿಕೊಂಡಿದೆ.

160. ಇತ್ತೀಚೆಗೆ ಸುದ್ದಿಯಲ್ಲಿದ್ದ “ಒಲ್ಟೆಟ್ ನದಿ ಕಣಿವೆ” ಯಾವ ದೇಶದಲ್ಲಿದೆ?
ಅ) ರೋಮೆನಿಯಾ
ಆ) ನೆದರ್ಲ್ಯಾಂಡ್
ಇ) ಕೀನ್ಯಾ
ಈ) ಸೂಡಾನ್
ರೋಮೆನಿಯಾ
ರೋಮೆನಿಯಾದ ಒಲ್ಟೆಟ್ ನದಿ ಕಣಿವೆ ಪ್ರದೇಶ ಪಳೆಯುಳಿಕೆ ನಿಕ್ಷೇಪಗಳಿಗೆ ಪ್ರಸಿದ್ಧವಾದ ಸ್ಥಳವಾಗಿದೆ.

Karunaduexams.com